ತಾ॥ ವಾಕ್ಕಿಗೂ, ಮನಸ್ಸಿಗೂ ಅಗೋಚರವಾಗಿರುವ ಬ್ರಹ್ಮನಾದ ನನ್ನ ಆನಂದಸ್ವರೂಪವನ್ನು ತಿಳಿದು ನನ್ನನ್ನು ಧ್ಯಾನಿಸುತ್ತಾರೊ ಅವರಿಗೆ ಜನನಮರಣಗಳ ಭಯವೇ ಇಲ್ಲ. ಇವರೇ ಶಾಶ್ವತವಾದ ಶಾಂತಿಯನ್ನು ಹೊಂದುವರು. ಇತರರು ಹೊಂದಲಾರರು.

ಶ್ಲೋ॥ ಶೃತ್ವೇತಿ ದೇವಾಮದ್ವಾಕ್ಯಂ ಕೈವಲ್ಯಜ್ಞಾನಮುತ್ತಮ
ಮ್ । ಜಪನ್ತೋ ಮಮ ನಾಮಾನಿ ಮಮ ಧ್ಯಾನ
ಪರಾಯಣಾಃ ॥೫೨॥

ಪ॥ ದೇವತೆಗಳು ನಾನೆಂದಿದನಾಲಿಸಿ ಕೈವಲ್ಯಕೆ ಬಗೆಸೋತಿ
ಹರು । ಭಾವಿಸಿ ನನ್ನಯ ನಾಮವ ಜಪಿಪರು ಧ್ಯಾನ
ಪರಾಯಣರು ॥೫೨॥

ತಾ॥ ಮೋಕ್ಷಕ್ಕೆ ಸಾಧಕವಾದ ಶ್ರೇಷ್ಠವಾದ ಬ್ರಹ್ಮಜ್ಞಾನವನ್ನುಂಟುಮಾಡುವ ನನ್ನ ಮಾತುಗಳನ್ನು ಕೇಳಿ ನನ್ನ ನಾಮಗಳನ್ನು ಜಪಿಸುತ್ತಾ, ನನ್ನ ಧ್ಯಾನದಲ್ಲೇ ನಿರತರಾಗಿ,

ಶ್ಲೋ॥ ಸರ್ವೇ ತೇ ಸ್ವಸ್ವದೇಹಾನ್ತೇ ಮತ್ಸಾಯುಜ್ಯಂ ಗತಾಃ
ಪುರಾ । ತತೋಯೇ ಪರಿದೃಶ್ಯನ್ತೇ ಪದಾರ್ಥಾ ಮದ್ವಿ
ಭೂತಯಃ ॥೫೩॥

ಪ॥ ಇವರೊಂದಿರುವರು ನನ್ನಯ ಸಾಯುಜ್ಯವನಂದಿಂ ಮೆಯ್ಗ
ಳನುಳಿದು । ಅವರಿಗೆ ವಸ್ತುಗಳೆಲ್ಲವು ಗೋಚರಿಪುವು
ನನ್ನ ವಿಭೂತಿಗಳೆಂದು ॥೫೩॥

ತಾ॥ ಅವರೆಲ್ಲರೂ ತಮ್ಮ ದೇಹಾಂತದಲ್ಲಿ ನನ್ನ ಸಾಯುಜ್ಯವನ್ನು (ನನ್ನಲ್ಲಿ ಏಕತ್ವವನ್ನು ಅಂದರೆ ಮೋಕ್ಷವನ್ನು) ಪಡೆದರು. ಆದುದರಿಂದ ಕಾಣಲ್ಪಡುವ ಸರ್ವ ಪದಾರ್ಥಗಳೂ ನನ್ನ ವಿಭೂತಿಗಳೇ ಆಗಿರುತ್ತವೆ.

ಶ್ಲೋ॥ ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿ
ತಮ್ । ಮಯಿ ಸರ್ವಂ ಲಯಂ ಯಾತಿ ತದ್ಬ್ರಹ್ಮಾ
ಸ್ಮ್ಯಹಮವ್ಯಯಮ್ ॥೫೪॥

ಪ॥ ಏಕನು ನಾಂ ಸೃಷ್ಟಿಪೆನಿಳಿಯಿಸುತಿಹೆನಾಕರ್ಷಿಸುವೆನು
ಬಿಡುತಿಹೆನು । ಲೋಕಗಳನು ನಾನದರಿಂದೀಶ್ವರನೇಕನು
ಮೆನ್ನಿಸಿಕೊಂಡಿಹೆನು ॥೩೯॥

ತಾ॥ ನಾನೊಬ್ಬನೇ ಲೋಕಗಳನ್ನು ಸೃಷ್ಟಿಸುವುದರಿಂದಲು, ರಕ್ಷಿಸುವುದರಿಂದಲು, ಅವುಗಳಲ್ಲೇ ವ್ಯಾಪಕನಾಗಿರುವುದರಿಂದಲು ಮತ್ತು ಅವುಗಳನ್ನು ನನ್ನಲ್ಲೇ ಲಯಗೊಳಿಸುವುದರಿಂದಲು ನಾನೊಬ್ಬನೇ ಈಶ್ವರನು.

ಶ್ಲೋ॥ ನ ದ್ವಿತೀಯೋ ಯತಸ್ತಸ್ಥೇ ತುರೀಯಂ ಬ್ರಹ್ಮಯತ್ಸ್ವಯಮ್ । ಭೂತಾನ್ಯಾತ್ಮನಿ ಸಂಹೃತ್ಯ ಚೈಕೋ ರುದ್ರೋಽವಸಾಮ್ಯಹಮ್ ॥೪೦॥

ಪ॥ ಎರಡನೆಯದು ಇರದಾಬ್ರಹ್ಮವೆನಾಂ ತುರೀಯನದರಿಂದೆ
ನಿಸಿಹೆನು । ಪರಿಪರಿಭೂತಗಳನು ನನ್ನೊಳೆ ಸಂಹರಿ
ಪೇಕೋರುದ್ರನು ನಾನು ॥೪೦॥

ತಾ॥ ನಾನು ಅದ್ವಿತೀಯ (ನನಗಿಂತಲು ಅನ್ಯವಾದದ್ದು ಯಾವದೂ ಇಲ್ಲ) ನಾದ್ದರಿಂದ ಬ್ರಹ್ಮನಾದ ನಾನೇ ತುರೀಯ (ಅವಸ್ಥೆಗಳಿಗೆ ಅತೀತ) ನಾಗಿದ್ದೇನೆ. ಸರ್ವಭೂತಗಳನ್ನು ನನ್ನಲ್ಲೇ ಲೀನಮಾಡಿಕೊಂಡಿರುವುದರಿಂದ ನಾನೊಬ್ಬನೇ ರುದ್ರನಾಗಿರುತ್ತೇನೆ.

ಶ್ಲೋ॥ ಸರ್ವಾನ್ಲೋಕಾನ್ಯದೀಶೇಽಹಂ ಈಶಿನೀಭಿಶ್ಚ ಶಕ್ತಿಭಿಃ ।
ಈಶಾನಮಸ್ಯ ಜಗತಃ ಸ್ವರ್ದೃಶಂ ಚಕ್ಷುರೀಶ್ವರಮ್ ॥
॥೪೧॥

ಪ॥ ಆಸರ್ವಮಹಾಲೋಕಗಳನು ನಾಸೀಶಿನಿಯೆಂಬಾಶಕ್ತಿಗಳ।
ನಾಸದಿನಾಳುತ್ತಿಹೆನದರಿಂ ಜಗದೀಶಾನನೆನುತ್ತರಿವುಳ್ಳ ॥
॥೪೧॥

ತಾ॥ ಸರ್ವ ಲೋಕಗಳನ್ನು ಈಶಿನೀ ಎಂಬ ಶಕ್ತಿಯಿಂದ ನಿಯಮಿಸಿರುವುದರಿಂದ ತಿಳಿದವರು ನನ್ನನ್ನು ಜಗದೀಶನೆಂದು ಕರೆಯುವರು.

ಶ್ಲೋ॥ ಈಶಾನಮಿನ್ದ್ರಂ ತಸ್ಥುಷಃ ಸರ್ವೇಷಾಮಪಿ ಸರ್ವದಾ ।
ಈಶಾನಸ್ಸರ್ವವಿದ್ಯಾನಾಂ ಯದೀಶಾನಸ್ತದಸ್ಮ್ಯಹಮ್
॥೪೨॥

ಪ॥ ಸರ್ವರಿಗು ಸದಾ ಪ್ರಭುವಾದುದರಿಂದೊರ್ವನೆ ನಾನಹೆ
ನೀಶಾನ । ಪರ್ವಿರುವೆಲ್ಲಾ ವಿದ್ಯೆಗಳಿಗು ನಾನೀಶ್ವರನದ
ರಿಂದೀಶಾನ ॥೪೨॥

ತಾ॥ ಸರ್ವರಿಗೂ ಸರ್ವದಾ ನಾನೊಬ್ಬನೇ ಪ್ರಭುವಾದ್ದರಿಂದಲು ಮತ್ತು ಸರ್ವವಿದ್ಯೆಗಳಿಗು ನಾನೇ ಈಶ್ವರನಾದ್ದರಿಂದಲು ಈಶಾನ ಎಂಬುದಾಗಿ ಕರೆಯಲ್ಪಡುತ್ತೇನೆ.

ಶ್ಲೋ॥ ಸರ್ವಭಾವಾನ್ನಿರೀಕ್ಷೇಽಹಂ ಆತ್ಮಜ್ಞಾನಂ ನಿರೀಕ್ಷಯೇ।
ಯೋಗಂ ಚ ಗಮಯೇ ಯಸ್ಮಾತ್ ಭಗವೋಽಹಮ

ಪ॥ ನಾನೆಲ್ಲಾ ಭಾವಗಳಿಂದಾತ್ಮಜ್ಞಾನವ ಕಾಣ್ಬೆನು ಕಾಣಿ
ಪೆನು । ನಾನೇ ಯೋಗವನೊಂದಿಸೆನದರಿಂ ನಾನೇ ಭಗ
ವಂತನುಮಹೆನು ॥೪೩॥

ತಾ॥ ಸರ್ವಭಾವಗಳಿಂದಲು ಆತ್ಮಜ್ಞಾನವು ನನಗೆ ಇರುವುದಲ್ಲದೆ ಇತರರಿಗೆ ಉಂಟುಮಾಡುವುದರಿಂದಲು ಮತ್ತು ಇತರರಿಗೆ ಯೋಗಸಿದ್ಧಿಯನ್ನುಂಟುಮಾಡುವುದರಿಂದಲು ನಾನೇ ಭಗವಂತನಾಗಿದ್ದೇನೆ.

ಶ್ಲೋ॥ ಅಜಸ್ರಂ ಯಚ್ಚಗೃಹ್ಣಾಮಿ ವಿಸೃಜಾಮಿ ಸೃಜಾಮಿ ಚ।
ಸರ್ವಾನ್ಲೋಕಾನ್ಪಾಸಯಾಮಿ ತೇನಾಹಂ ವೈ ಮಹೇ
ಶ್ವರಃ ॥೪೪॥

ಪ॥ ಯಾವುದನು ಸದಾ ಧರಿಪೆನೊ ತೊರೆವೆನೊ ಯಾವುದಸೃಜಿ
ಪೆನೊ ಅವನಾನು । ಈ ವಿಶ್ವಕೆಲ್ಲಾಂ ನೆಲೆಯದರಿಂ
ಭಾವಿಸು ನಾನೆ ಮಹೇಶ್ವರನು ॥೪೪॥

ತಾ॥ ನಾನುಸರ್ವ ಲೋಕಗಳನ್ನು ಯಾವಾಗಲು ಸೃಷ್ಟಿಸುವುದರಿಂದಲು, ಅವುಗಳಲ್ಲಿ ವ್ಯಾಪಿಸಿರುವುದರಿಂದಲು ಮತ್ತು ನನ್ನಲ್ಲೇ ಅವುಗಳನ್ನು ಲೀನಮಾಡುವುದರಿಂದಲು ನಾನೇ ಮಹೇಶ್ವರನಾಗಿದ್ದೇನೆ.

ಶ್ಲೋ॥ ಮಹತ್ಯಾತ್ಮಜ್ಞಾನಯೋಗೈಶ್ವರ್ಯೈರ್ಯಸ್ತು ಮಹೀಯತೇ । ಸರ್ವಾನ್ಭಾವಾನ್ಪರಿತ್ಯಜ್ಯ ಮಹಾದೇವಶ್ಚ ಸೋಽಸ್ಮ್ಯಹಮ್ ॥ ಏಷೋಽಸ್ಮಿ ದೇವಃ ಪ್ರದಿಶೋಽನುಸರ್ವಾಃ।ಪೂರ್ವೋಹಿಜಾತೋಽಸ್ಮ್ಯಹಮೇವ ಗರ್ಭೇ ॥ ಅಹಂ ಹಿ ಜಾತಶ್ಚ ಜನಿಷ್ಯಮಾಣಃ । ಪ್ರತ್ಯಙ್ಮುಖಾಸ್ತಿಷ್ಠತಿ ಸರ್ವತೋಮುಖಃ ॥೪೫-೪೬॥

ಪ॥ ಆತ್ಮಜ್ಞಾನಸುಯೋಗೈಶ್ವರ್ಯ ಮಹತ್ತಿಂದಂ ಭಾವಗಳನ್ನು ।
ಬಿತ್ತುವ ಬೆಳೆವಽಳಿಯಿಪ ನನ್ನನು ಸಾರಿತ್ತವಸಿ ಮಹಾ
ದೇವನನು ॥ ನಾನೆಲ್ಲಾ ದಿಕ್ಕುಗಳೊಳಮೆಸೆಯುವನಾನೊ
ಗೆದೆನು ಗರ್ಭದೆಮೊದಲು ।ನಾನೊಗೆದವನೊಗೆವನು ವಿಶ್ವ
ಮುಖಂನಾನೇ ಪ್ರತ್ಯಙ್ಮುಖ ಕೇಳು ॥೪೫-೪೬॥

ತಾ॥ ಯಾವನು ಮಹತ್ವವುಳ್ಳವನಾಗಿಯೂ, ಅಧಿಪತಿಯಾಗಿಯೂ, ತನ್ನ ಜ್ಞಾನಯೋಗಗಳಿಂದ ಸಕಲ ಭಾವಪದಾರ್ಥಗಳನ್ನೂ ಸೃಷ್ಟಿಸಿ ರಕ್ಷಿಸುತ್ತಾನೋ ಅಂಥಾ ಮಹದೇವನು ನಾನೇ. ದೇವನಾಗಿಯೂ, ದಿಕ್ಕುವಿದಿಕ್ಕು ಸ್ವರೂಪನಾಗಿಯೂ, ಗರ್ಭದಲ್ಲಿ ಮುಂಚೆ ಹುಟ್ಟಿದವನಾಗಿಯೂ, ಈಗ ಹುಟ್ಟಿರುವನಾಗಿಯೂ, ಮೇಲೆ ಹುಟ್ಟುವನಾಗಿಯೂ, ಗರ್ಭಸಂಬಂಧವಿಲ್ಲದವನಾಗಿಯೂ, ಸರ್ವತೋಮುಖನಾಗಿಯೂ ನಾನೇ ಇದ್ದೇನೆ.

ಶ್ಲೋ॥ ವಿಶ್ವತಃ ಚಕ್ಷುರುತ ವಿಶ್ವತೋಮುಖೋ।ವಿಶ್ವತೋಬಾಹುರುತ ವಿಶ್ವತಸ್ಪಾತ್ ॥ ಸಂಬಾಹುಭ್ಯಾಂ ನಮತಿ ಸಂಪತತ್ರೈಃ । ದ್ಯಾವಾಭೂಮೀ ಜನಯನ್ ದೇವ ಏಕಃ ॥

ಇರುವುವೋ ಅವನೇ ನಾನು. ಅ, ಉ, ಮ್ ಎಂಬ ತ್ರಿಮಾತ್ರಾಕಾಲಿಕವಾದ ಅಕ್ಷರಗಳಿಂದ ಕೂಡಿದ ಪ್ರಣವವೇ ನಾನು.

ಶ್ಲೋ॥ ಊರ್ಧ್ವಮುನ್ನಾಮಯೇ ಯಸ್ಮಾತ್ ಅಧಶ್ಚಾಪನಯಾಮ್ಯಹಮ್ । ತಸ್ಮಾದೋಂಕಾರಏವಾಹಂ ಏಕೋ ನಿತ್ಯಸ್ಸನಾತನಃ ॥೩೨॥

ಪ॥ ಯಾವನಿಗಿಂತೂರ್ಧ್ವನೆ ಕೀಳಹುದೋ ಯಾವನಿಗಿಲ್ಲವೊ ಕೀಳದರಿಂ। ಒರ್ವನು ನಿತ್ಯಸನಾತನನಹ ನಾನಾ ಓಂಕಾರವೆ ನಿಜವದರಿಂ ॥೩೨॥

ತಾ॥ ಪ್ರಣವ (ಓಂಕಾರ) ಮಂತ್ರವನ್ನು ಸ್ವಾಧೀನವಮಾಡಿಕ್ಕೊಂಡಿರುವ (ಸದಾ ಜಪಿಸುತ್ತಿರುವ) ಯೋಗಿಗಳನ್ನು ಮೇಲಿನ ಲೋಕಗಳಿಗೂ, ಪಾಪಿಗಳನ್ನು ಪಾಪಭೂಯಿಷ್ಠವಾದ ಕೆಳಗಿನ ಲೋಕಗಳಿಗೂ ಕಳುಹಿಸುವವನು ನಾನು. ಆದುದರಿಂದ ಓಂಕಾರವೇ ನಾನು. ನಾನು ಅದ್ವಿತೀಯನು, ನಿತ್ಯನು ಮತ್ತು ಅನಾದಿಯು.

ಶ್ಲೋ॥ ಋಚೋಯಜೂಂಷಿಸಾಮಾನಿ ಯೋ ಬ್ರಹ್ಮಾ ಯಜ್ಞಕರ್ಮಣಿ । ಪ್ರಣಾಮಯೇ ಬ್ರಾಹ್ಮಣೇಭ್ಯಃ ತೇನಾಹಂ ಪ್ರಣವೋಮತಃ ॥೩೩॥

ಪ॥ ಆವಂ ಬ್ರಹ್ಮನೊ ಯಜ್ಞದೊಳವನಾಂ ಸಾಮಯಜೂಋಕ್ಕುಗಳಾನು । ಆವಿಪ್ರಶ್ರೇಷ್ಠರಿಗಾಂ ನಮಿಸುವೆನೀ ಬಗೆಯಿಂ ಪ್ರಣವವೆ ನಾನು ॥೩೩॥

ತಾ॥ ಋಗ್ವೇದ, ಯಜುರ್ವೇದ, ಸಾಮವೇದಗಳಲ್ಲಿ ಹೇಳಿರುವ ಯಜ್ಞಕರ್ಮಗಳಲ್ಲಿ ಬ್ರಹ್ಮತ್ವವನ್ನು ಹೊಂದಿರುವ ಬ್ರಾಹ್ಮಣರಿಗೆ ನಾನು ನಮಸ್ಕಾರಮಾಡುವುದರಿಂದ ನಾನು ಪ್ರಣವ ಎಂದೆನ್ನಿಸಿಕ್ಕೊಳ್ಳುತ್ತೇನೆ.

ಶ್ಲೋ॥ ಸ್ನೇಹೋ ಯಥಾ ಮಾಂಸಪಿಣ್ಡಂ ವ್ಯಾಪ್ನೋತಿ ವ್ಯಾಪಯತ್ಯಪಿ । ಸರ್ವಾನ್ ಲೋಕಾನಹಂ ತದ್ವತ್ ಸರ್ವವ್ಯಾಪೀ ತತೋಽಸ್ಮ್ಯಹಮ್ ॥೩೪॥

ಪ॥ ಎಂತೆಣ್ಣೆಯು ಪುದಿದಿದೆಯೋ ಮಾಂಸದೊಳೆಂತು ವ್ಯಾಪಿಸುವುದೊ ತಾನು । ಅಂತೆಯೆ ಜಗಗಳನಾಂ ವ್ಯಾಪಿಸುವೇನಂತೇ ವ್ಯಾಪಿಸಿಕೊಳ್ಳುವೆನು ॥೩೪॥

ತಾ॥ ತುಪ್ಪವೇ ಮೊದಲಾದ ಜಿಡ್ಡು ಪದಾರ್ಥಗಳು ದೇಹಸ್ಥವಾದ ಮಾಂಸಖಂಡಗಳಲ್ಲಿ ವ್ಯಾಪಿಸಿ ಅವುಗಳು ದೇಹಾದ್ಯಂತವೂ ಹರಡುವ ಹಾಗೆ ಮಾಡುವಂತೆ ನಾನು ಸರ್ವಲೋಕಗಳನ್ನೂ ವ್ಯಾಪಿಸಿದ್ದೇನೆ. ಆದುದರಿಂದಲೇ ನಾನು ಸರ್ವವ್ಯಾಪೀ ಎಂದು ಕರೆಯಲ್ಪಡುತ್ತೇನೆ.

ಶ್ಲೋ॥ ಬ್ರಹ್ಮಾ ಹರಿಶ್ಚ ಭಗವಾನ್ ಆದ್ಯನ್ತಂ ನೋಪಲಬ್ಧವಾನ್। ತಥಾಽನ್ಯೇ ಚ ಸುರಾ ಯಸ್ಮಾತ್ ಅನನ್ತೋಽಹಮತೋ ಮತಃ ॥೩೫॥

ಪ॥ ಅರಿಯಂ ಬ್ರಹ್ಮನು ಹರಿಭಗವಂತನು ಸುರರುಂ ನನ್ನಾದ್ಯಂತವನು । ಧರೆಯಲ್ಲದರಿನನಂತನೆನುತ್ತಂ ಕರೆಯಲ್ಪಡುತಿರುವೆನು ನಾನು ॥೩೬॥

ತಾ॥ ಹರಿಬ್ರಹ್ಮರೂ, ದೇವತೆಗಳೂ ನನ್ನ ಆದ್ಯಂತವನ್ನು ತಿಳಿಯಲಾರರು. ಆದುದರಿಂದ ನಾನು ಅನಂತ ಅಂದರೆ ನಾಶವಿಲ್ಲದವನು ಎಂಬುದಾಗಿ ಕರೆಯಲ್ಪಡುತ್ತೇನೆ.

ಶ್ಲೋ॥ ಗರ್ಭಜನ್ಮಜರಾಮೃತ್ಯುಸಂಸಾರಭಯಸಾಗರಾತ್ । ತಾರಯಾಮಿ ಯತೋಭಕ್ತಾನ್ ತಸ್ಮಾತ್ತಾರೋಽಹಮೀರಿತಃ ॥೩೬॥

ಪ॥ ಗರ್ಭದ ಜನ್ಮದ ಮುಪ್ಪಿನ ಮೇಣ್ ಮೃತಿಯಬ್ಧಿ ಭಯಂಕರ ಸಂಸಾರ । ಆ ಭಕ್ತರನಿದರಿಂದುತ್ತರಿಪೆನಗುದ್ಭವಿಸಿತು ಹೆಸರದು ತಾರ ॥ ॥೩೬॥

ಗರ್ಭದುಃಖ, ಜನನದುಃಖ, ಮುಪ್ಪಿನ ದುಃಖ, ಮರಣದುಃಖ ಇವೇ ಮಂತಾದ ದುಃಖಗಳೊಳಗೊಂಡಿರತಕ್ಕ ಸಂಸಾರವೆಂಬ ಸಾಗರದಿಂದ ಭಕ್ತರನ್ನು ದಾಟಿಸುತ್ತೇನಾದ್ದರಿಂದ ನನಗೆ 'ತಾರ' ಎಂಬ ಹೆಸರು ಬಂದಿದೆ.

ಶ್ಲೋ॥ ಚತುರ್ವಿಧೇಷು ದೇಹೇಷು ಜೀವತ್ವೇನ ವಸಾಮ್ಯಹಮ್। ಸೂಕ್ಷ್ಮೋಭೂತ್ವಾ ಚ ಹೃದ್ದೇಶೇ ಯತ್ತತ್ಸೂಕ್ಷ್ಮಃ ಪ್ರಕೀರ್ತಿತಃ ॥೩೭॥

ಪ॥ ನಾಲ್ವಗೆ ದೇಹಗಳಲ್ಲಾಂ ಜೀವರ ಭಾವವನಾನುತೆ ವಸಿಸುವೆನು । ಹೃದ್ವನಜದೆ ಸೂಕ್ಷ್ಮನು ನಾನದರಿನುಸುರ್ವರು ಸೂಕ್ಷ್ಮನೆನ್ನನ್ನು ॥೩೭॥

ತಾ॥ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ ಎಂಬ ನಾಲ್ಕು ವಿಧವಾದ ದೇಹಗಳಲ್ಲಿ ನಾನು ಜೀವರೂಪದಿಂದ ವಾಸಮಾಡುತ್ತೇನೆ. ಜೀವರ ಹೃದಯಸ್ಥಾನದಲ್ಲಿ ಸೂಕ್ಷ್ಮರೂಪದಿಂದಿರುವುದರಿಂದ ನನ್ನನ್ನು ಸೂಕ್ಷ್ಮನೆಂದು ಕರೆಯುತ್ತಾರೆ.

ಶ್ಲೋ॥ ಮಹಾತಮಸಿ ಮಗ್ನೇಭ್ಯೋ ಭಕ್ತೇಭ್ಯೋಯತ್ಪ್ರಕಾಶಯೇ । ವಿದ್ಯುದ್ವದತುಲಂ ರೂಪಂ ತಸ್ಮಾದ್ವೈದ್ಯುತಮಸ್ಮ್ಯಹಮ್ ॥೩೮॥

ಪ॥ ಸದ್ಭಕ್ತರನು ಮುಳುಂಗಿಪ ತಮದಿಂದೆಬ್ಬಿಪೆ ನೀಕೇಜದಿ ನಾನು । ವಿದ್ಯುತ್ತಂತೆನ್ನಯ ರೂಪದರಿಂ ವೈದ್ಯುತನೆನಿಸಿರುವೆನು ನಾನು ॥೩೮॥

ತಾ॥ ಅಜ್ಞಾನಾಂಧಕಾರದಲ್ಲಿ ಮುಳುಗಿರುವ ಭಕ್ತರನ್ನು ನನ್ನ ಜ್ಞಾನಪ್ರಕಾಶದಿಂದ ಎಚ್ಚರಿಸುತ್ತೇನೆ- ನನ್ನ ಸ್ವರೂಪವು ವಿದ್ಯುಚ್ಛಕ್ತಿಯಂತೆ ಇರುವುದರಿಂದ ವೈದ್ಯುತ ಎಂಬುದಾಗಿ ನನ್ನನ್ನು ಕರೆಯುತ್ತಾರೆ.

ಶ್ಲೋ॥ ಏಕಏವ ಯತೋ ಲೋಕಾನ್ ವಿಸೃಜಾಮಿ ಸೃಜಾಮಿ ಚ । ನಿವಾಸಯಾಮಿ ಗೃಹ್ಣಾಮಿ ತಸ್ಮಾದೇಕೋಽಹಮೀಶ್ವರಃ ॥೩೯॥

ಪ॥ ಇಂದ್ರಾಗ್ನಿಯಮಂ ನಿಋುಋತಿ ವರುಣನು ಮುಂದನಿಲ ಕುಬೇರನು ನಾನು । ನಂದೀಶ್ವರ ಭೂರ್ಭುವರುಂ ಸ್ವರ್ಮಹರೊಂದು ಜನೋಲೋಕವು ನಾನು ॥

ತಾ॥ ಇಂದ್ರ, ಅಗ್ನಿ, ಯಮ, ನಿಋುತಿ, ವರುಣ, ವಾಯು, ಕುಬೇರ, ಈಶಾನ ಎಂಬ ಅಷ್ಟದಿಕ್ಪಾಲಕರೂ, ಭೂಲೋಕ, ಭುವರ್ಲೋಕ, ಮಹೋಲೋಕ, ಜನೋಲೋಕ, ತಪೋಲೋಕ, ಸತ್ಯಲೋಕ ಎಂಬ ಏಳು ಲೋಕಗಳೂ ನಾನೇ.

ಶ್ಲೋ॥ ತಪಸ್ಸತ್ಯಂ ಚ ಪೃಥಿವೀ ಚಾಪಸ್ತೇಜೋಽನಿಲೋಽಪ್ಯಹಮ್ । ಆಕಾಶೋಽಹಂ ರವಿಸ್ಸೋಮೋ ನಕ್ಷತ್ರಾಣಿ ಗ್ರಹಾಣ್ಯಹಮ್ ॥೨೫॥

ಪ॥ ತಪವಾಂ ಸತ್ಯವು ನಾನಹೆನಾಕಾಶ್ಯಪಿ ಜಲತೇಜೋವಾಯುಗಳು । ವಿಪುಲಾಕಾಶವು ನಾನೇ ಚಂದ್ರನು ತಪನಗ್ರಹನಕ್ಷತ್ರಗಳು ॥

ತಾ॥ ತಪಸ್ಸು ಮತ್ತು ಸತ್ಯವು ನಾನೇ, ಭೂಮಿಯು, ಜಲವು, ಅಗ್ನಿಯು, ವಾಯುವು ಮತ್ತು ಆಕಾಶವು ನಾನೇ. ಸೂರ್ಯಚಂದ್ರರು, ನಕ್ಷತ್ರಗಳು ಮತ್ತು ಗ್ರಹಗಳು ನಾನೇ.

ಶ್ಲೋ॥ ಪ್ರಾಣಃ ಕಾಲಸ್ತಥಾ ಮೃತ್ಯುಃ ಅಮೃತಂ ಭೂತಮಪ್ಯಹಮ್ । ಭವ್ಯಂ ಭವಿಷ್ಯತ್ಕೃತ್ಸ್ನಂ ಚ ವಿಶ್ವಂ ಸರ್ವಾತ್ಮಕೋಽಪ್ಯಹಮ್ ॥೨೬॥

ಪ॥ ನಾನೇ ಪ್ರಾಣವು ಕಾಲವು ಮೃತ್ಯುವು ನಾನಮೃತವು ಭೂತವು ಭವ್ಯ । ನಾನೆ ಭವಿಷ್ಯತ್ತೆಲ್ಲಾ ವಿಶ್ವವು ನಾನೇ ಸರ್ವಾತ್ಮಕನಯ್ಯ ॥೨೬॥

ತಾ॥ ಪ್ರಾಣವು, ಕಾಲವು, ಮೃತ್ಯುವು, ಅಮೃತವು ನಾನೇ. ಭೂತಭವಿಷ್ಯದ್ವರ್ತಮಾನಕಾಲಗಳೆಲ್ಲವೂ ನಾನೇ. ಪ್ರಪಂಚವೆಲ್ಲವೂ ನಾನೇ. ಸರ್ವಸ್ವರೂಪನೂ ನಾನೇ.

ಶ್ಲೋ॥ ಓಮಾದೌ ಚ ತಥಾ ಮಧ್ಯೇ ಭೂರ್ಭುವಸ್ಸ್ವಸ್ತಥೈವ ಚ । ತತಃ ಪರಂ ಪಠ್ಯತೇ ಯತ್ ಗಾಯತ್ರ್ಯಪಿ ತಥೈವ ಚ । ತತೋಽಹಂ ವಿಶ್ವರೂಪೋಽಸ್ಮಿ ಶೀರ್ಷಂಚ ಜಪತಾಂ ಸದಾ ॥೨೭॥

ಪ॥ ಓಮ್ ಆದಿಯೊಳಾಂ ಭೂರ್ಭುವಸ್ವರುವಾವ:ಧ್ಯದೆ ನಾನಾಗಿಹೆನು ॥ ನೇಮದೊಳೇ ಪಠಿಸುವ ಗಾಯತ್ರಿಯು ರಾಮನೆ! ಕೇಳ್ ನಾನಾಗಿಹೆನು । ಆ ಮೇರೆಯೆ ವಿಶ್ವಸುರೂಪನು ಕಡೆಗಾ ಮುಕುಟವು ಜಪಿಪರಿಗಾನು ॥೨೭॥

ತಾ॥ ಗಾಯತ್ರೀಮಂತ್ರದ ಆದಿಯಲ್ಲಿರುವ ಪ್ರಣವವೂ, ಆಮಂತ್ರದ ಮಧ್ಯವಲ್ಲಿರುವ 'ಭೂರ್ಭುವಸ್ಸ್ವಃ' ಎಂಬುದೂ ಮತ್ತು ಆ ಮಂತ್ರದ ಕೊನೆಯಾದ 'ಓಮಾಪೋಜ್ಯೋತೀರಸೋ' ಎಂಬುದೂ, ಗಾಯತ್ರೀಮಂತ್ರವೂ, ಪ್ರಪಂಚಸ್ವರೂಪನೂ, ಜಪವನ್ನು ಮಾಡತಕ್ಕವರಿಗೆ ಮುಕುಟಪ್ರಾಯನೂ ನಾನೇ.

ಶ್ಲೋ॥ ಅಶಿತಂ ಪಾಯಿತಂ ಚಾಹಂ ಕೃತಂ ಚಾಕೃತಮಪ್ಯಹಮ್ । ಪರಂಚೈವಾಪರಂ ಚಾಹಂ ಅಹಂ ಸರ್ವಪರಾಯಣಃ ॥೨೮॥

ಪ॥ ತಿಂದುದು ಕುಡಿಸಿದುದುಂ ಕೃತವಕೃತವುಮೆಂದುಂ ಪರವಪರವು ನಾನು । ಒಂದೇಂ ಸರ್ವಪರಾಯಣ ನಾಂ ರಘುನನ್ದನ! ಕೇಳ್ ನೀನು ॥೨೮॥

ತಾ॥ ತಿನ್ನತಕ್ಕ ಮತ್ತು ಕುಡಿಯತಕ್ಕ ಪದಾರ್ಥಗಳೂ, ಮಾಡಿದ ಮತ್ತು ಮಾಡದೇ ಇರುವ ಕರ್ಮಗಳೂ, ಶ್ರೇಷ್ಠನು ಮತ್ತು ಶ್ರೇಷ್ಠನಲ್ಲದವನೂ, ಸರ್ವಕ್ಕೂ ಆಶ್ರಯನೂ ನಾನೇ.

ಶ್ಲೋ॥ ಅಹಂ ಜಗದ್ಧಿತಂ ದಿವ್ಯಂ ಅಕ್ಷರಂ ಸೂಕ್ಷ್ಮಮಪ್ಯಹಮ್ । ಪ್ರಾಜಾಪತ್ಯಂ ಪವಿತ್ರಂ ಚ ಸೌಮ್ಯಮಗ್ರಾಹ್ಯಮಗ್ರಿಯಮ್ ॥೨೯॥

ಪ॥ ನಾನೆ ಜಗದ್ಧಿತ ದಿವ್ಯಪವಿತ್ರನು ನಾನೇ ಸೂಕ್ಷ್ಮನುಮಕ್ಷರನು । ನಾನೇ ಪ್ರಾಜಾಪತ್ಯನು ಸೌಮ್ಯನು ನಾನಗ್ರಾಹ್ಯನುಮಗ್ರಿಯನು ॥೨೯॥

ತಾ॥ ಜಗತ್ತಿಗೆ ಹಿತಕಾರಿಯಾದವನೂ, ಶ್ರೇಷ್ಠನಾದವನೂ, ನಾಶರಹಿತನೂ, ಸೂಕ್ಷ್ಮಸ್ವರೂಪನೂ, ಪ್ರಜಾಪತಿದೇವತಾ ಸಂಬಂಧವಾದ ಮಂತ್ರವೂ, ಪವಿತ್ರನೂ, ಸೌಮ್ಯನೂ, ಅಗ್ರಾಹ್ಯವು ಎಲ್ಲಕ್ಕೂ ಮುಂದಾಗಿರುವ ಪದಾರ್ಥಗಳೂ ನಾನೇ.

ಶ್ಲೋ॥ ಅಹಮೇವೋಪಸಂಹರ್ತಾ ಮಹಾಗ್ರಾಸೋ ಜಗನ್ನಿಧಿಃ । ಹೃದಯೇ ದೇವತಾತ್ವೇನ ಪ್ರಾಣತ್ವೇನ ಪ್ರತಿಷ್ಠಿತಃ ॥೩೦॥

ಪ॥ ನಾನು ಜಗನ್ನಿಧಿಯುಪಸಂಹರ್ತೃವು ನಾನು ಮಹಾಗ್ರಾಸನು ನಾನು । ನಾನೇ ಹೃದಯದೊಳಾದೇವತ್ವದಿ ನಾನೇ ಪ್ರಾಣತ್ವದಿನಿಹೆನು ॥೩೦॥

ತಾ॥ ಸಕಲ ಕಾರ್ಯಗಳನ್ನು ಫಲರೂಪದಿಂದ ಪೂರ್ಣಗೊಳಿಸುವವನೂ, ಸರ್ವವನ್ನೂ ನುಂಗುವವನೂ, ಜಗತ್ತಿಗೆ ನಿಧಿಯಂತಿರುವವನೂ, ಸಮಸ್ತ ಪ್ರಾಣಿಗಳ ಹೃದಯದಲ್ಲಿ ದೇವತ್ವದಿಂದಲೂ, ಪ್ರಾಣರೂಪದಿಂದಲೂ ಇರುವವನೂ ನಾನೇ.

ಶ್ಲೋ॥ ಶಿರಶ್ಚೋತ್ತರತೋಯಸ್ಯ ಪಾದೌ ದಕ್ಷಿಣತಸ್ತಥಾ । ಯಶ್ಚ ಸರ್ವೋತ್ತರಸ್ಸಾಕ್ಷಾತ್ ಓಙ್ಕಾರೋಽಹಂ ತ್ರಿಮಾತ್ರಿಕಃ ॥೩೧॥

ಪ॥ ಯಾವನ ತಲೆಯುತ್ತರಕೋ ದಕ್ಷಿಣಕಾವನಕಾಲ್ಗಳೊ ನಾನವನು । ಸರ್ವೋತ್ತರ ಸಾಕ್ಷಾನ್ಮಾತ್ರಾತ್ರಯದಾವೋಙ್ಕಾರವೆ ನಾನಹೆನು ॥೩೧॥

ತಾ॥ ಯಾವನ ತಲೆಯು ಉತ್ತರದಿಕ್ಕಿನ ಕಡೆಯಲ್ಲಿಯು ಮತ್ತು ಯಾವನ ಕಾಲುಗಳು ದಕ್ಷಿಣದಿಕ್ಕಿನ ಕಡೆಯಲ್ಲಿಯು

ತಾ|| ನಾನು ಸರ್ವರಿಗೂ ದೊಡ್ಡವನು, ಸಮಸ್ತ ದೇವತೆಗಳಿಗೂ ಶ್ರೇಷ್ಠನೂ, ಪುರಾಣ ಪುರುಷನೂ, ವರುಣನೂ, ಪೂರ್ಣನೂ, ಭಗವಂತನೂ, ತೇಜೋರೂಪದಿಂದಿರುವವನೂ, ಮಹೇಶ್ವರನೂ, ಸರ್ವಕ್ಕೂ ಆದಿಯೂ ಆಗಿದ್ದೇನೆ.

ಶ್ಲೋ|| ಋಗ್ವೇದೋಽಹಂ ಯಜುರ್ವೇದಃ ಸಾಮವೇದೋಽಹ
ಮಾತ್ಮಭೂಃ| ಅಥರ್ವಣಶ್ಚ ಮನ್ತ್ರೋಽಹಂ ತಥಾ ಚಾಂಗಿ
ರಸೋವರಃ ||೧೭||

ಪ|| ನಾನೇ ಋಗ್ವೇದವು ನಾನೇ ಯಜುಸ್ಸಾನೇ ಸಾಮವು
ಮಾತ್ಮಭುವ | ನಾನೆ ಅಥರ್ವಣವಾನೇ ಮಂತ್ರವು
ನಾನೇ ಅಂಗಿರಸನುಜೀವ ||೧೭||

ತಾ|| ನಾನೇ ಋಗ್ವೇದವು, ನಾನೇ ಯಜುರ್ವೇದವು, ನಾನೇ ಸಾಮವೇದವು, ನಾನೇ ಅಥರ್ವಣವೇದವು, ನಾನೇ ಚತುರ್ಮುಖ, ನಾನೇ ಮಂತ್ರವು, ನಾನೇ ಶುಕ್ರನು.

ಶ್ಲೋ|| ಇತಿಹಾಸಪುರಾಣಾನಿ ಕಲ್ಪೋಽಹಂ ಕಲ್ಪವಾನಹಮ್ |
ನಾರಾಶಂಸೀ ಚ ಗಾಥಾಽಹಂ ವಿದ್ಯೋಪನಿಷದೋಸ್ಮ್ಯ
ಹಮ್ ||೧೮||

ಪ|| ನಾನಿತಿಹಾಸಪುರಾಣವು ಕಲ್ಪವು ನಾನೇ ಕಲ್ಪಗಳುಳ್ಳವ
ನು | ಆನಾರಾಶಂಶಿಯು ಗಾಥೆಯು ಮೇಣಾನುಪನಿಷ
ದವು ವಿದ್ಯೆಯೆನು ||೧೮||

ತಾ|| ಇತಿಹಾಸಗಳೂ, ಪುರಾಣಗಳೂ, ಕಲ್ಪಗಳೂ ನಾನೇ, ಕಲ್ಪಗಳುಳ್ಳವನೂ ನಾನೇ, ರುದ್ರಪ್ರತಿಪಾದಕವಾದ ನಾರಾಶಂಸೀ ಮಂತ್ರವೂ, ಯಜ್ಞಪ್ರಶಂಸಾರೂಪವಾದ ಗಾಥಾಮಂತ್ರವೂ, ಉಪಾಸನಾರೂಪ ವಿದ್ಯೆಯೂ, ಬ್ರಹ್ಮಪ್ರತಿಪಾದಕವಾದ ಉಪನಿಷತ್ತುಗಳೂ ನಾನೇ.

ಶ್ಲೋ|| ಶ್ಲೋಕಾಸ್ಸೂತ್ರಾಣಿಚೈವಾಹಂ ಅನುವ್ಯಾಖ್ಯಾನಮೇವ
ಚ | ವ್ಯಾಖ್ಯಾನಾನಿ ತಥಾ ವಿದ್ಯಾಃ ಇಷ್ಟಂ ಹುತಮಥಾ
ಹುತಿಃ ||೧೯||

ಪ|| ನಾನಾಸೂತ್ರಶ್ಲೋಕವನು ವ್ಯಾಖ್ಯಾನವ್ಯಾಖ್ಯಾನಗಳಾನು |
ನಾನೇ ವಿದ್ಯೆಗಳಿಷ್ಟವು ಹುತವಾಂ ಮೇಣಾಹುತಿಯೆನಿ
ಸಿಹೆ ನಾನು ||೧೯||

ತಾ|| ಶ್ಲೋಕಗಳೂ, ಋಷಿಕೃತಗಳಾದ ಸರ್ವಸೂತ್ರಗಳೂ, ವ್ಯಾಖ್ಯಾನಗಳೆನಿಸಿಪ ಮಹಾಭಾಷ್ಯಾದಿಗಳೂ, ಅನುವ್ಯಾಖ್ಯಾನಗಳೆನಿಸಿದ ಶಾಸ್ತ್ರಗಳೂ, ಗಾಂಧರ್ವವಿದ್ಯೆಯೇ ಮುಂತಾದ ವಿದ್ಯೆಗಳೂ, ಯಾಗಾದಿಗಳೂ, ದೇವತೆಗಳಿಗೆ ಕೊಡುವ ಹವಿಸ್ಸುಗಳೂ ನಾನೇ-

ಶ್ಲೋ||ದತ್ತಾದತ್ತಮಯೋಲೋಕಃ ಪರಲೋಕೋಽಹಮಕ್ಷರಃ|
ಕ್ಷರಸ್ಸರ್ವಾಣಿಭೂತಾನಿ ದಾನ್ತಿಶ್ಶಾನ್ತಿರಹಂ ಖಗಃ ||

ಪ|| ದತ್ತವದತ್ತವುಮಿಹಪರಗಳು ನಾನಕ್ಷರ ಕ್ಷರವಕ್ಷರನಾನು |
ತಳ್ಪಾಕ್ಷರಭೂತಗಳುಂ ಖಗನಾದಿತ್ಯನು ಶಮೆದಾನ್ತಿ
ಯು ನಾನು ||೨೦||

ತಾ|| ಕೊಡಲ್ಪಡುವುದಕ್ಕೆ ಯೋಗ್ಯವಾದ ಹಸು ಮುಂತಾದವುಗಳೂ, ಕೊಡಲ್ಪಡುವುದಕ್ಕಾಗದ ಪರ್ವತಾದಿಗಳೂ, ಇವುಗಳಿಂದ ಕೂಡಿದ ಈ ಲೋಕವೂ, ಪರಲೋಕವೂ, ನಾಶರಹಿತನಾದವನೂ, ನಾಶವಾಗುವ ಸಮಸ್ತ ವಸ್ತುಗಳ ಸ್ವರೂಪನೂ, ದಾಂತಿಶಾಂತಿಗಳೂ, ಅಂತರಿಕ್ಷಗಾಮಿಯಾದ ಪಕ್ಷಿಯೂ ನಾನೇ ಆಗಿದ್ದೇನೆ.

ಶ್ಲೋ|| ಗುಹ್ಯೋಽಹಂ ಸರ್ವದೇವೇಷು ಆರಣ್ಯೋಽಹಮಜೋಽ
ಪ್ಯಜಮ್ | ಪುಷ್ಕರಂ ಚ ಪವಿತ್ರಂ ಚ ಮಧ್ಯಂಚಾಹಂ
ತತಃ ಪರಮ್ ||೨೧||

ಪ|| ಎಲ್ಲಾ ದೇವರೊಳಾನೆ ರಹಸ್ಯವುಮಲ್ಲದೆ ಆರಣ್ಯವುಮಜ
ನು | ಕೇಳ್ ಪುಷ್ಕರನಾಂ ನಾನೆ ಪವಿತ್ರವುಮಲ್ಲದೆ
ಮಧ್ಯವು ಪರನಹೆನು ||೨೧||

ತಾ|| ಸರ್ವದೇವತೆಗಳಲ್ಲಿಯೂ ಅಡಗಿರುವವನು ನಾನೇ. ಅರಣ್ಯದಲ್ಲಿರುವ ಸರ್ವಪದಾರ್ಥಗಳೂ ನಾನೇ. ಹುಟ್ಟದಿರುವವನೂ ನಾನೇ. ಅಂತರಿಕ್ಷವೂ, ಮಧ್ಯಗತವಾದ ಭೂಲೋಕವೂ, ಕೆಳಗಿರುವ ಪಾತಾಳಲೋಕವೂ ನಾನೇ.

ಶ್ಲೋ|| ಬಹಿಶ್ಚಾಹಂ ತಥಾ ಚಾನ್ತಃ ಪುರಸ್ತಾದಹಮವ್ಯಯಃ |
ಜ್ಯೋತಿಶ್ಚಾಹಂ ತಮಶ್ಚಾಹಂ ತನ್ಮಾತ್ರಾಣೀನ್ದ್ರಿಯಾ
ಣ್ಯಹಮ್ ||೨೨||

ಪ|| ಬಹಿರಂತವು ಮುಂಗಡೆ ನಾನವ್ಯಯನಹೆ ನಾಂ ತೇಜಸ್ಸಾ
ಗಿಹೆನು | ಬಹುತಮವುಂ ತನ್ಮಾತ್ರೆಗಳುಂ ನಾನಹೆ
ಸರ್ವೇಂದ್ರಿಯಗಳು ನಾನು ||೨೨||

ತಾ|| ಹೊರಭಾಗವು, ಒಳಭಾಗವು ಮತ್ತು ಮುಂಭಾಗವು ನಾನೇ. ನಾಶರಹಿತನು ನಾನೇ ಪ್ರಕಾಶವಾಗಿಯೂ, ಅಂಧಕಾರವಾಗಿಯೂ ತೋರತಕ್ಕವನು ನಾನೇ. ಶಬ್ದ, ಸ್ಪರ್ಶ, ರೂಪ, ರಸ, ಗಂಧತನ್ಮಾತ್ರೆಗಳೂ, ಪಂಚಕರ್ಮೇಂದ್ರಿಯಗಳೂ, ಪಂಚಜ್ಞಾನೇಂದ್ರಿಯಗಳೂ ನಾನೇ.

ಶ್ಲೋ|| ಬುದ್ಧಿಶ್ಚಾಹಮಹಂಕಾರೋ ವಿಷಯಾಣ್ಯಹಮೇವ ಚ|
ಬ್ರಹ್ಮಾ ವಿಷ್ಣುರ್ಮಹೇಶೋಽಹಂ ಉಮಾಸ್ಕನ್ದೋ ವಿ
ನಾಯಕಃ ||೨೩||

ಪ|| ಬುದ್ಧಿಯಹಂಕಾರವು ನಾನಾಗಿಹೆ ನಾನೇ ವಿಷಯಗಳೆ
ನಿಸುವೆನು | ಸಿದ್ಧಿವಿನಾಯಕನಪರ್ಣೆಷಣ್ಮುಖನುಮ್ಮ
ನ್ಮೂರ್ತಿತ್ರಯ ನಾನು ||೨೩||

ತಾ|| ಬುದ್ಧ್ಯಹಂಕಾರಗಳೂ, ಶಬ್ದಾದಿವಿಷಯಗಳೂ, ಬ್ರಹ್ಮ ವಿಷ್ಣು ಮಹೇಶ್ವರ ಎಂಬ ತ್ರಿಮೂರ್ತಿಗಳೂ, ಪಾರ್ವತಿಯೂ, ಷಣ್ಮುಖನೂ, ವಿನಾಯಕನೂ ನಾನೇ ಆಗಿರುವೆನು.

ಶ್ಲೋ|| ಇನ್ದ್ರೋಽಗ್ನಿಶ್ಚ ಯಮಶ್ಚಾಹಂ ನಿಋತಿರ್ವರುಣೋಽ
ನಿಲಃ | ಕುಬೇರೋಽಹಂ ತಥೇಶಾನೋ ಭೂರ್ಭುವಸ್ಸ್ವ
ರ್ಮಹರ್ಜನಃ ||೨೪||

ಶ್ಲೋ॥ ಮನ್ದರಂ ಪ್ರಯಯುಸ್ಸರ್ವೇ ಮಮ ಪ್ರಿಯತರಂ ಗಿರಿಮ್ । ಸ್ತುತ್ವಾ ಪ್ರಾಂಜಲಯೋದೇವಾಃ ಮಾಂ ತಥಾ ಪುರತಸ್ಥಿತಾಃ ॥೮॥

ಪ॥ ಬಂದರು ಸರ್ವರುಮೆನಗೆ ಬಹುಪ್ರಿಯುವೆಂದೆನಿಸಿದ ಮಂದರಗಿರಿಗೆ । ಅಂದವರೆಲ್ಲರುನೊಡ್ಡಿದ ಬೊಗಸೆಗಳಿಂದಿದ್ದರು ಕಾಣುವ ಹಾಗೆ ॥೮॥

ತಾ॥ ನನಗೆ ಅತ್ಯಂತ ಪ್ರಿಯವಾದ ಮಂದರಪರ್ವತಕ್ಕೆ ಸರ್ವರೂ ಬಂದು ನನ್ನ ಎದುರಿಗೆ ಅಂಜಲಿಬದ್ಧರಾಗಿ ನನ್ನನ್ನು ಸ್ತೋತ್ರಮಾಡಿದರು.

ಶ್ಲೋ॥ ತಾನ್ ದೃಷ್ಟ್ವಾಽಥ ಮಯಾ ದೇವಾನ್ ಲೀಲಾಕುಲಿತ ಚೇತಸಃ । ತೇಷಾಮುಪಹೃತಂ ಜ್ಞಾನಂ ಬ್ರಹ್ಮಾದೀನಾಂ ದಿವೌಕಸಾಮ್ ॥ ೯ ॥

ಪ॥ ಲೀಲಾಕುಲರಾದಾದೇವತೆಗಳನಾಲೋಕಿಸುತವರೆದೆಯಲ್ಲಿ । ತಾಳಿದ್ದಾಜ್ಞಾನವನಪಹರಿಸಿದೆನಾಲೋಚಿಸಿ ನಾಂ ನೃಪಮೌಳಿ ! ॥೯॥

ತಾ॥ ಅವರ ಪ್ರಶ್ನೆಗೆ ಸರಿಯಾದ ಉಪದೇಶಮಾಡಬೇಕೆಂದು ಬ್ರಹ್ಮಾದಿದೇವತೆಗಳನ್ನು ನೋಡಿ ಅವರಲ್ಲಿದ್ದ ಜ್ಞಾನವನ್ನು ಅಪಹರಿಸಿದೆನು.

ಶ್ಲೋ॥ ಅಥ ತೇಽಪಹೃತಜ್ಞಾನಾಃ ಮಾಮಾಹುಃ ಕೋಭವಾನಿತಿ । ಅಥಾಬ್ರುವಮಹಂ ದೇವಾನ್ ಅಹಮೇವ ಪುರಾತನಃ ॥೧೦॥

ಪ॥ ತಪಿಸಿತ್ತಾ ಜ್ಞಾನವು ಬಳಿಕೆನ್ನೊಡನವರೆಂದರು ನೀನಾರೆನುತ । ಅವರಿಗೆ ಹೇಳಿದೆನುತ್ತರವನು ನೀವವಧರಿಸಿ ಸನಾತನನೆನುತ ॥೧೦॥

ತಾ॥ ಅನಂತರದಲ್ಲಿ ಅಜ್ಞಾನಿಗಳಾದ ಅವರು ನನ್ನನ್ನು 'ನೀನು ಯಾರು' ಎಂಬುದಾಗಿ ಕೇಳಿದರು. ಆಗ ನಾನು 'ನಾನೇ ಅನಾದಿಯೆನಿಸಿದ ಪರಬ್ರಹ್ಮನು' ಎಂದು ಹೇಳಿದೆನು.

ಶ್ಲೋ॥ ಆಸಂ ಪ್ರಥಮಮೇವಾಹಂ ವರ್ತಾಮಿ ಚ ಸುರೇಶ್ವರಾಃ। ಭವಿಷ್ಯಾಮಿ ಚ ಲೋಕೇಽಸ್ಮಿನ್ ಮತ್ತೋನಾನ್ಯೋಽಸ್ತಿ ಕಶ್ಚನ ॥೧೧॥

ಪ॥ ನಾನೇ ಮೊದಲಿದ್ದವನಿಂದಾದರೂ ನಾನೇ ಇರುವೆನು ಸುರವರರೇ । ನಾನೇ ಮುಂದೆಯುಮಿರುವೆನು ನನಗಿಂತಾವುದುಮಿಲ್ಲೊಂದುಂ ಬೇರೆ ॥೧೧॥

ತಾ॥ ಎಲೈ ದೇವತೆಗಳಿರಾ, ಈ ಪ್ರಪಂಚದ ಸೃಷ್ಟಿಗೆ ಪೂರ್ವದಲ್ಲಿ ಇದ್ದವನೂ ನಾನೇ. ಈಗ ಇರತಕ್ಕವನೂ ನಾನೇ. ಮುಂದೆಯೂ ಇರುವವನೂ ನಾನೇ. ನನಗಿಂತ ಬೇರೆ ಯಾವದೂ ಇಲ್ಲ.

ಶ್ಲೋ॥ ವ್ಯತಿರಿಕ್ತಂ ಚ ಮತ್ತೋಽಸ್ತಿ ನಾನ್ಯತ್ಕಿಂಚಿತ್ಸುರೇಶ್ವರಾಃ । ನಿತ್ಯೋಽನಿತ್ಯೋಽಹಮನಘೋ ಬ್ರಹ್ಮಣಾಂ ಬ್ರಹ್ಮಣಸ್ಪತಿಃ ॥೧೨॥

ಪ॥ ತ್ರಿದಶೇಶ್ವರರೇ ! ನನಗಿದಿರಾಗಿಹ ಪದಾರ್ಥವಿರದಿನ್ನೆನಗಿಂತ । ಇದೊ ನಿತ್ಯನು ನಾನನಘನನಿತ್ಯನುಮಿದೋಮೇಲಾಂ ಬ್ರಹ್ಮನಿಗಿಂತ ॥೧೨॥

ತಾ॥ ಎಲೈ ದೇವತೆಗಳಿರಾ, ನನಗಿಂತ ಬೇರೆಯಾಗಿರತಕ್ಕ ವಸ್ತುವೇ ಇಲ್ಲ. ನಿತ್ಯನೂ ನಾನೇ, ಅನಿತ್ಯವಾಗಿ ತೋರತಕ್ಕ ಪದಾರ್ಥವೂ ನಾನೇ, ಪಾಪರಹಿತನೂ ನಾನೇ, ಚತುರ್ಮುಖ ಬ್ರಹ್ಮನಿಗೆ ಅಧಿಪತಿಯೂ ನಾನೇ.

ಶ್ಲೋ॥ ದಕ್ಷಿಣಾಂಚ ಉದಂಚೋಽಹಂ ಪ್ರಾಂಚಃ ಪ್ರತ್ಯಂಚ ಏವ ಚ । ಅಧಶ್ಚೋರ್ಧ್ವಂ ಚ ವಿದಿಶೋ ದಿಶಶ್ಚಾಹಂ ಸುರೇಶ್ವರಾಃ ॥೧೩॥

ಪ॥ ನಾನೇದಕ್ಷಿಣವುತ್ತರನಾನೇ ನಾನೇ ಪೂರ್ವವು ಪಶ್ಚಿಮವು। ನಾನೂರ್ಧ್ವವಧಸ್ಸಾನೆವಿದಿಕ್ಕುಗಳು ಆನೇ ದಿಕ್ಕುಗಳೆಲ್ಲತಿಳಿ ॥೧೩॥

ತಾ॥ ನಾನೇ ದಕ್ಷಿಣದಿಕ್ಕು, ನಾನೇ ಉತ್ತರದಿಕ್ಕು, ನಾನೇ ಪೂರ್ವ ದಿಕ್ಕು, ನಾನೇ ಪಶ್ಚಿಮದಿಕ್ಕು, ನಾನೇ ಊರ್ಧ್ವದಿಕ್ಕು, ನಾನೇ ವಿದಿಕ್ಕುಗಳು.

ಶ್ಲೋ॥ ಸಾವಿತ್ರೀ ಚಾಪಿ ಗಾಯತ್ರೀ ಸ್ತ್ರೀಪುಮಾನಪುಮಾನಪಿ । ತ್ರಿಷ್ಟುಬ್ಜಗತ್ಯನುಷ್ಟುಪ್ಚ ಪಂಕ್ತಿಶ್ಛನ್ದಸ್ತ್ರಯೀಮಯಃ ॥೧೪॥

ಪ॥ ನಾನೇ ಸಾವಿತ್ರಿಯು ಗಾಯಿತ್ರಿಯು ನಾನೇ ಪುಂಸ್ತ್ರೀನಪುಜಗತಿ । ನಾನೆ ಅನುಷ್ಟುಪ್ ತ್ರಿಷ್ಟುಪುಛಂದಸ್ಸಾನೇ ವೇದತ್ರಯಕುಗತಿ ॥೧೪॥

ತಾ॥ ಸಾವಿತ್ರೀ ಗಾಯತ್ರೀ ಸ್ತ್ರೀಪುರುಷನಪುಂಸಕ ರೂಪದಿಂದಿರುವವನೂ, ತ್ರಿಷ್ಟುಪ್, ಅನುಷ್ಟುಪ್, ಪಂಕ್ತಿ, ಛಂದಸ್ಸು, ವೇದತ್ರಯಗಳು ಇವೆಲ್ಲವೂ ನಾನೇ.

ಶ್ಲೋ॥ ಸತ್ಯೋಽಹಂ ಸರ್ವಗಶ್ಶಾನ್ತಃ ತ್ರೇತಾಽಗ್ನಿಗೌರವಂ ಗುರುಃ । ಗೌರ್ಯಹಂ ಗಹ್ವರಂ ಚಾಹಂ ದ್ಯೌರಹಂ ಜಗತಾಂ ವಿಭುಃ ॥೧೫॥

ಪ॥ ಸತ್ಯವು ಸರ್ವವನಂತವು ನಾನೇ ತ್ರೇತಾಗ್ನಿಯು ಗೌರವಗುರುವು । ಆತ್ರಿದಿವವು ಗೌರಿಯು ಗಹ್ವರವು ಜಗತ್ತಾನೇ ಜಗಗಳಿಗೆ ವಿಭು ॥

ತಾ॥ ಸತ್ಯಸ್ವರೂಪನೂ, ಸರ್ವವ್ಯಾಪಕನೂ, ಶಾಂತನೂ, ಆಹವನೀಯ, ಗಾರ್ಹಪತ್ಯ, ದಕ್ಷಿಣಾಗ್ನಿಗಳೆಂಬ ಅಗ್ನಿತ್ರಯ ಸ್ವರೂಪನೂ, ಗುರುತ್ವವೂ, ಗುರುವೂ, ಗೌರಿಯೂ, ಗುಹೆಯು, ಜಗತ್ತು, ಸ್ವರ್ಗವೂ, ಪ್ರಪಂಚಕ್ಕೆ ಪ್ರಭುವೂ ನಾನೇ ॥

ಶ್ಲೋ॥ ಜ್ಯೇಷ್ಠಸ್ಸರ್ವಸುರಶ್ರೇಷ್ಠೋ ವಸಿಷ್ಠೋಽಹಮಪಾಂಪತಿಃ । ಆಢ್ಯೋಽಹಂ ಭಗವಾನೀಶಃ ತೇಜೋಽಹಂ ಚಾದಿರಪ್ಯಹಮ್ ॥೧೬॥

ಪ॥ ಜ್ಯೇಷ್ಠನು ಸರ್ವಸುರಶ್ರೇಷ್ಠನು ವರ್ಷಿಷ್ಠನು ಮೇಣ್ ವರುಣನು ನಾನು । ಆಢ್ಯನು ಭಗವಂತನು ತೇಜಸ್ಸು ಪುಹೇಶ್ವರನಾನಾದಿಯುಮಹೆನು ॥೧೬॥

ಶಿವಗೀತೆ

ಆರನೆಯ ಅಧ್ಯಾಯ—ವಿಭೂತಿವಿಸ್ತರಯೋಗ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಶ್ರೀರಾಮ ಉವಾಚ—

ಶ್ಲೋ ॥ ಭಗವನ್ನತ್ರ ಮೇ ಚಿತ್ರಂ ಮಹದೇತತ್ಪ್ರಜಾಯತೇ ।
ಶುದ್ಧಸ್ಫಟಿಕಸಙ್ಕಾಶಃ ತ್ರಿನೇತ್ರಶ್ಚನ್ದ್ರಶೇಖರಃ ॥೧॥

ಶ್ರೀ ರಾಮನು ಹೇಳಿದನು—

ಪ॥ ಜನಿಸುತ್ತಿದೆ ಭಗವಂತನೆ! ನನ್ನಯ ಮನದಲ್ಲಾಶ್ಚರ್ಯವು;
ನೀನು । ತ್ರಿನಯನನಮಲಸ್ಫಟಿಕಕ್ಕೆಣೆಯಹ ತನುವಾಂ
ತಾಶಶಿಶೇಖರನು ॥

ತಾ॥ ಎಲೈ ಭಗವಂತನೆ, ನಿನ್ನ ಮಾತನ್ನು ಕೇಳಿ ನನಗೆ ಒಂದು ಆಶ್ಚರ್ಯವುಂಟಾಗಿದೆ. ನೀನು ಶುದ್ಧ ಸ್ಫಟಿಕದಂತೆ ಶುಭ್ರವರ್ಣದಿಂದ ಪ್ರಕಾಶಿಸುತ್ತಿರುವೆ. ಮೂರು ಕಣ್ಣುಗಳಿಂದಲೂ, ಶಿರಸ್ಸಿನಲ್ಲಿ ಚಂದ್ರಕಲೆಯಿಂದಲೂ ಕೂಡಿರುವೆ.

ಶ್ಲೋ ॥ ಮೂರ್ತಸ್ತ್ವಂ ತು ಪರಿಚ್ಛಿನ್ನಾಕೃತಿಃ ಪುರುಷರೂಪ
ಧೃಕ್ । ಅಮ್ಬಯಾ ಸಹಿತೋಽತ್ರೈವ ರಮಸೇ ಪ್ರಮ
ಥೈಸ್ಸಹ ॥೨॥

ಪ॥ ಮೂರ್ತನು ಪೂರುಷರೂಪನು ನೀನಾಪಶಕ್ತಿಯನಂಬೆಯ
ಜೊತೆಯಲ್ಲಿ । ಗೊತ್ತಾದಾಕೃತಿಯಿಂದಂ ಪ್ರಮಥರ
ನೊತ್ತದೆ ಸೇರ್ದಾಡುವೆಯಿಲ್ಲಿ ॥೨॥

ತಾ॥ ಪರಿಮಿತಿಯುಳ್ಳ ಒಂದು ಆಕಾರವುಳ್ಳವನಾಗಿ ಸಾಮಾನ್ಯಪುರುಷನಂತೆ ಅಂಬಾ ಸಹಿತನಾಗಿದ್ದುಕೊಂಡು ಪ್ರಮಥ ಸಮೂಹದೊಡನೆ ಇಲ್ಲಿ ವಿಹರಿಸುತ್ತಿದ್ದೀಯೆ ॥

ಶ್ಲೋ॥ ತ್ವಂ ಕಥಂ ಪಂಚಭೂತಾದಿ ಜಗದೇತಚ್ಚರಾಚರಮ್ ।
ತದ್ಬ್ರೂಹಿ ಗಿರಿಜಾಕಾಂತ ಮಯಿ ತೇಽನುಗ್ರಹೋ
ಯದಿ ॥೩॥

ಪ॥ ಭಾಪಿಸೆ ನಿನ್ನಿಂದೇನುದಯಿಸಿತೋ ಸ್ಥಾವರ ಜಂಗಮ
ವಿಶ್ವವಿದು । ಪಾರ್ವತಿಯರಸನೆ! ನನಗೊಲ್ದಿರೆ ನೀಂ
ಸರ್ವಮುಮಂ ಬಿಡದೆನ್ನುವುದು ॥೩॥

ತಾ॥ ಹೇ ಪಾರ್ವತೀಪತಿಯೆ, ಪಂಚಭೂತಾತ್ಮಕವು ಮತ್ತು ಚರಾಚರಾತ್ಮಕವು ಆದ ಪ್ರಪಂಚವು ಹೇಗೆ ನಿನ್ನಿಂದ ಸೃಷ್ಟಿಸಲ್ಪಟ್ಟಿತು ಎನ್ನುವುದನ್ನು ನನ್ನ ಮೇಲೆ ನಿನಗೆ ಕೃಪೆಯಿದ್ದರೆ ಹೇಳು.

ಶ್ರೀ ಮಹಾದೇವ ಉವಾಚ :—

ಶ್ಲೋ॥ ಶೃಣು ರಾಮ ಮಹಾಭಾಗ ದುರ್ಜ್ಞೇಯಮಮರೈರಪಿ ।
ತತ್ಪ್ರವಕ್ಷ್ಯಾಮಿ ತೇ ಭಕ್ತ್ಯಾ ಬ್ರಹ್ಮಚರ್ಯೇಣ ಸುವ್ರತ ॥
॥೪॥

ಈಶ್ವರನು ಹೇಳಿದನು—

ಪ॥ ಇದನು ಮಹಾಭಾಗನೆ! ರಾಘವನೇ! ತ್ರಿದಶರುಮರಿ
ಯರು ಸುವ್ರತನೇ । ಇದೆ ಭಕ್ತಿ ಬ್ರಹ್ಮಚರ್ಯೆ ನಿನ್ನಲ್ಲಿದ
ರಿಂ ನುಡಿವೆನು ನಿನಗೆನೆನೇ ॥೪॥

ತಾ॥ ಮಹಾತ್ಮನಾದ ಶ್ರೀರಾಮನೆ, ನೀನು ಭಕ್ತಿಯುಳ್ಳವನಾಗಿಯು ಮತ್ತು ಜಿತೇಂದ್ರಿಯನಾಗಿಯು ಇರುವುದರಿಂದ ದೇವತೆಗಳೂ ಸಹಿತ ತಿಳಿಯಪೇ ಇರತಕ್ಕ ವಿಷಯವನ್ನು ನಿನಗೆ ತಿಳಿಸುತ್ತೇನೆ.

ಶ್ಲೋ॥ ಪಾರಂ ಯಾಸ್ಯಸ್ಯನಾಯಾಸಾತ್ ಯೇನ ಸಂಸಾರ
ನೀರಧೇಃ । ದೃಶ್ಯನ್ತೇ ಪಂಚಭೂತಾನಿ ಯೇ ಚ ಲೋ
ಕಾಶ್ಚತುರ್ದಶ ॥೫॥

ಪ॥ ಏತರಿನಾಸಂಸಾರದ ಸಾಗರದಾತಟಕಳಲದೆ ಸೇರುವೆಯೋ!
ಸೈತು ಚತುರ್ದಶಜಗಗಳನೈದುಂ ಭೂತಗಳನು ನೀಂ
ಕಾಣುವೆಯೋ ॥೫॥

ತಾ॥ ಇದರಿಂದ ಸಂಸಾರವೆಂಬ ಸಮುದ್ರದ ತಡಿಯನ್ನು ಸುಲಭವಾಗಿ ಸೇರುವೆ. ಕಾಣತಕ್ಕ ಪಂಚಭೂತಗಳು, ಹದಿನಾಲ್ಕು ಲೋಕಗಳು,

ಶ್ಲೋ ॥ ಸಮುದ್ರಾಃ ಪರ್ವತಾದೇವಾಃ ರಾಕ್ಷಸಾಋಷಯಸ್ತ
ಥಾ । ದೃಶ್ಯನ್ತೇ ಯಾನಿ ಚಾನ್ಯಾನಿ ಸ್ಥಾವರಾಣಿ ಚ
ರಾಣಿ ಚ ॥೬॥

ಪ॥ ಗಿರಿಸಾಗರಗಳು ಋಷಿಗಳು ದೇವಾಸುರರುಂ ಮೆರೆವರೊ
ಕಾಣುತ್ತೆ । ಮೆರೆಯುವುವೋ ಸ್ಥಾವರ ಜಂಗಮಗಳು
ಪೆರಪೆರತಿವು ಗೋಚರಿಸುತ್ತ ॥೬॥

ತಾ॥ ಸಮುದ್ರಗಳು, ಪರ್ವತಗಳು, ದೇವರಾಕ್ಷಸರು, ಋಷಿಗಳು, ಇನ್ನೂ ಮುಂತಾದ ಚರಾಚರಾತ್ಮಕವಾದ ಸಕಲ ಪ್ರಪಂಚವು,

ಶ್ಲೋ॥ ಗನ್ಧರ್ವಾಃ ಪ್ರಮಥಾನಾಗಾಃ ಸರ್ವೇ ತೇ ಮದ್ವಿಭೂ
ತಯಃ । ಪುರಾ ಬ್ರಹ್ಮಾದಯೋದೇವಾಃ ದ್ರಷ್ಟು
ಕಾಮಾ ಮಮಾಕೃತಿಮ್ ॥೭॥

ಪ॥ ಗಂಧರ್ವಪ್ರಮಥರು ನಾಗರುಮೀಯೊಂದೊಂದೆನ್ನ ವಿಭೂ
ತಿಗಳು । ಅಂದೇ ಬ್ರಹ್ಮಾದಿಗಳೆನ್ನಾಕೃತಿಯಿಂದವನೋ
ಡುವಪೇಕ್ಷೆಯೊಳು ॥

ತಾ॥ ಗಂಧರ್ವರು, ನಾಗರು, ಎಲ್ಲರೂ ನನ್ನ ಅಂಶಸಂಭೂತರು. ಹಿಂದೆ ಬ್ರಹ್ಮಾದಿ ದೇವತೆಗಳು ನನ್ನ ನಿಜವಾದ ಸ್ವರೂಪವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರಾಗಿ,

ಬ್ರಾಹ್ಮಣರಿಂದುಪಾಸಿಸಲ್ಪಡತಕ್ಕವನಾರು ? ಗಾಯತ್ರೀ ಮಂತ್ರದಲ್ಲಿಯೂ, ಸೂರ್ಯನಲ್ಲಿಯೂ, ಅಗ್ನಿಯಲ್ಲಿಯೂ, ಗೋಚರನಾಗುವ ಈಶ್ವರನು.

ಗಾಯತ್ರೀಯಲ್ಲಿಯೂ, ಸೂರ್ಯ, ಅಗ್ನಿ ಮತ್ತು ಈಶ್ವರನಲ್ಲಿ ಇರತಕ್ಕದ್ದಾವುದು ? ಆ ಪರಬ್ರಹ್ಮತತ್ತ್ವವೇ.

ಶ್ಲೋ॥ ಪ್ರತ್ಯಕ್ಷದೇವತಾ ಕಾ । ಮಾತಾ ಪೂಜ್ಯೋಗುರುಶ್ಚ ಕಸ್ತಾತಃ ॥ ಕಸ್ಸರ್ವದೇವತಾತ್ಮಾ । ವಿದ್ಯಾಕರ್ಮಾನ್ವಿತೋ ವಿಪ್ರಃ ॥

ಕಣ್ಣೆದುರಿಗೆ ಕಾಣಿಸುವ ದೇವರಾರು ? ತಾಯಿಯು.

ಪೂಜ್ಯನಾದ ಗುರುವಾರು ? ತಂದೆಯು.

ಸಕಲ ದೇವತಾ ಸ್ವರೂಪನಾರು ? ವಿದ್ಯಾವಂತನೂ, ಕರ್ಮನಿರತನೂ ಆದ ಬ್ರಾಹ್ಮಣನು.

ಶ್ಲೋ॥ ಕಶ್ಚ ಕುಲಕ್ಷಯಹೇತು।ಸ್ಸಂತಾಪಸ್ಸಜ್ಜನೇಷು ಯೋಕಾರಿ ॥ ಕೇಷಾಮಮೋಘವಚನಂ । ಯೇಚಪುನಸ್ಸತ್ಯಮೌನಶಮಶೀಲಾಃ ॥

ವಂಶನಾಶಕ್ಕೆ ಕಾರಣವೇನು ? ಸತ್ಪುರುಷರ ಮನಸ್ಸನ್ನು ನೋಯಿಸುವುದು.

ಯಾರ ಮಾತುಗಳು ವ್ಯರ್ಥವಾಗಲಾರವು ? ಸತ್ಯವ್ರತ, ಮೌನವ್ರತ, ಸೈರಣೆಯುಳ್ಳವರ ಮಾತು.

ಶ್ಲೋ ॥ ಕಿಂ ಜನ್ಮ ವಿಷಯಸಂಗಃ । ಕಿಮುತ್ತರಂ ಜನ್ಮ ಪುತ್ರಸ್ಸ್ಯಾತ್ ॥ ಕೋಽಪರಿಹಾರ್ಯೋಮೃತ್ಯುಃ ಕುತ್ರಪದಂ ವಿನ್ಯಸೇಚ್ಚದೃಕ್ಪೂತೇ ॥

ಜನ್ಮವಾವುದು ? ವಿಷಯ ಸಂಬಂಧವು.

ಎರಡನೆಯ ಜನ್ಮವೇನು ? ಮಗನು.

ಪರಿಹರಿಸುವುದಕ್ಕೆ ಅಸಾಧ್ಯವಾದುದಾವುದು ? ಮರಣವು.

ಎಲ್ಲಿ ಕಾಲಿಡಬೇಕು ? ನೋಡುತ್ತಾ ಶುದ್ಧವಾದ ಸ್ಥಳವಲ್ಲಿ.

ಶ್ಲೋ॥ ಪಾತ್ರಂ ಕಿಮನ್ನದಾನೇ । ಕ್ಷುಧಿತಂ ಕೋರ್ಚ್ಯೋಹಿ ಭಗವದವತಾರಃ ॥ ಕಶ್ಚಭಗವಾನ್ಮಹೇಶ । ಶ್ಶಂಕರನಾರಾಯಣಾತ್ಮೈಕಃ ॥

ಅನ್ನದಾನಕ್ಕೆ ಯೋಗ್ಯವಾದುದಾವುದು ? ಹಸಿದಿರತಕ್ಕ ಪ್ರಾಣಿಯು.

ಪೂಜಿಸಲ್ಪಡುವುದಕ್ಕೆ ಯೋಗ್ಯರ್ಯಾರು ? ದೇವರ ಅವತಾರ ಪುರುಷರು.

ಭಗವಂತನಾರು ? ಶಂಕರ, ವಿಷ್ಣು ಮೊದಲಾದ ನಾನಾ ಸ್ವರೂಪಗಳಿಂದ ಆರಾಧಿಸಲ್ಪಡುವ ಅದ್ವಿತೀಯನಾದ ಪರಮಾತ್ಮನೊಬ್ಬನೇ.

ಶ್ಲೋ॥ ಫಲಮುಪಿಭಗವದ್ಭಕ್ತೇಃ । ಕಿಂ ತಲ್ಲೋಕ ಸ್ವರೂಪ ಸಾಕ್ಷಾತ್ವಮ್ ॥ ಮೋಕ್ಷಶ್ಚಕೋಹ್ಯವಿದ್ಯಾ । ಸ್ತಮಯಃ ಕಸ್ಸರ್ವವೇದಭೂರಥಚೋಮ್ ॥

ಭಗವದ್ಭಕ್ತಿಗೆ ಫಲವೇನು ? ಭಗವತ್ಸಾಮಿಪ್ಯವನ್ನು ಹೊಂದುವಿಕೆ ಮತ್ತು ಆತ್ಮಸ್ವರೂಪವನ್ನು ಚನ್ನಾಗಿ ತಿಳಿದುಕೊಳ್ಳುವಿಕೆ.

ಮೋಕ್ಷವೆಂದರೇನು ? ಅಜ್ಞಾನವು ನಿಶ್ಶೇಷವಾಗಿ ನಾಶವಾಗಿ ಹೋಗುವುದು.

ಎಲ್ಲಾ ವೇದಗಳಿಗೂ ಮೂಲವ್ಯಾವುದು ? ಪರಬ್ರಹ್ಮ ಸೂಚಕವಾದ ಓಂಕಾರವು.

ಶ್ಲೋ॥ ಇತ್ಯೇಷಾ ಕಂಠಸ್ಥಾ । ಪ್ರಶ್ನೋತ್ತರರತ್ನಮಾಲಿಕಾ ಯೇಷಾವಮ್ ॥ ತೇ ಮುಕ್ತಾಭರಣಾ ಇವ । ವಿಮಲಾಶಾಭಾಂತಿ ಸತ್ಸಮಾಜೇಷು ॥

ಈ ಪ್ರಶ್ನೋತ್ತರ ರತ್ನಮಾಲಿಕೆಯನ್ನು ಚನ್ನಾಗಿ ಕಂಠಪಾಠಮಾಡಿ, ಅದರ ಅರ್ಥವನ್ನು ತಿಳಿದುಕೊಂಡು ಆ ಪ್ರಕಾರವಾಗಿ ನಡೆದುಕೊಳ್ಳುವವರಿಗೆ ಉಂಟಾಗುವ ಫಲವೇನು ? ಮುತ್ತಿನ ಸರದಂತೆ ಸರ್ವದೋಷಗಳಿಂದ ರಹಿತರಾಗಿ ಸತ್ಪುರುಷರ ಸಭೆಗಳಲ್ಲಿ ಪ್ರಕಾಶಿಸುವುದೇ !

॥ ಓಂ ತತ್ಸತ್ ॥

ಪೂಜ್ಯನಾರು ? ಶ್ರೋತ್ರಿಯ ಬ್ರಹ್ಮನಿಷ್ಠನು.

ಸೇವಿಸಲ್ಪಡತಕ್ಕವನಾರು ? ದಾತೃವು.

ದಾತೃವಾರು ? ಯಾಚಕರಿಗೆ ತೃಪ್ತಿಯನ್ನುಂಟುಮಾಡು ವವನು.

ಶ್ಲೋ॥ ಕಿಂ ಭಾಗ್ಯಂ ದೇಹವತಾ। ಮಾರೋಗ್ಯಂ ಕಃ ಫಲೀ ಕೃಷಿಕೃತ್ ॥ ಕಸ್ಯ ನ ಪಾಪಂ ಜಪತಃ। ಕಃ ಪೂರ್ಣೋ ಯಃ ಪ್ರಜಾವಾಂಸ್ಸ್ಯಾತ್ ॥

ದೇಹಧಾರಿಗಳಿಗೆ ಭಾಗ್ಯವಾವುದು ? ಆರೋಗ್ಯವು.

ಫಲವುಳ್ಳವನಾವನು ? ವ್ಯವಸಾಯಮಾಡುವವನು.

ಪಾಪವಿಲ್ಲದವನಾವನು ? ಮಂತ್ರಪಠನಶೀಲನು.

ತುಂಬಿರುವವನಾವನು ? ಮಕ್ಕಳುಳ್ಳವನು.

ಶ್ಲೋ॥ ಕಿಂ ದುಷ್ಕರಂ ನರಾಣಾಂ। ಯನ್ಮನಸೋನಿಗ್ರಹಸ್ಸತತಮ್ ॥ ಕೋಬ್ರಹ್ಮಚರ್ಯವಾಂಸ್ಸ್ಯಾ। ದ್ಯಶ್ಚಾಸ್ಖಲಿತೋರ್ಧ್ವರೇತಸ್ಕಃ ॥

ಮನುಷ್ಯರು ಮಾಡುವುದಕ್ಕೆ ಅಶಕ್ಯವಾದುದಾವುದು ? ಸರ್ವದಾ ಮನೋನಿಗ್ರಹವು.

ಬ್ರಹ್ಮಚರ್ಯ ಉಳ್ಳವನಾವನು ? ಊರ್ಧ್ವರೇತಸ್ಕನು.

ಶ್ಲೋ॥ ಕಾ ಚ ಪರದೇವತೋಕ್ತಾ। ಚಿಚ್ಛಕ್ತಿಃ ಕೋ ಜಗದ್ಭರ್ತಾ ॥ ಸೂರ್ಯಸ್ಸರ್ವೇಷಾಂ ಕೋ। ಜೀವನಹೇತುಸ್ಸ ಪರ್ಜನ್ಯಃ ॥

ಪರದೇವತೆಯಾರು ? ಪರಬ್ರಹ್ಮದಶಕ್ತಿಯು.

ಲೋಕಸಂರಕ್ಷಕನಾರು ? ಸೂರ್ಯನು.

ಎಲ್ಲರೂ ಬದುಕುವುದಕ್ಕೆ ಕಾರಣವಾವನು ? ಮಳೆಗಧಿಪತಿಯಾದ ವರುಣನು.

ಶ್ಲೋ॥ ಕಶ್ಶೂರೋಯೋಭೀತ। ತ್ರಾತಾ ತ್ರಾತಾ ಚ ಕಸ್ಸ ಗುರುಃ ॥ ಕೋಹಿಜಗದ್ಗುರುರುಕ್ತ। ಶ್ಶಂಭುರ್ಜ್ಞಾನಂ ಕುತಶ್ಶಿವಾದೇವ ॥

ಶೂರನಾರು ? ಭಯಪಟ್ಟವರನ್ನು ರಕ್ಷಿಸುವವನು.

ರಕ್ಷಕನಾರು ? ಗುರುವು.

ಲೋಕಕ್ಕೆ ಗುರುವಾವನು ? ದೇವರು.

ಜ್ಞಾನವಾವನಿಂದ ಹುಟ್ಟುವುದು ? ದೇವರಿಂದ.

ಶ್ಲೋ॥ ಮುಕ್ತಿಂ ಲಭೇತ ಕಸ್ಮಾ। ನ್ಮುಕುಂದಭಕ್ತೇರ್ಮುಕುಂದಃ ಕಃ ॥ಯಸ್ತಾರಯೇದವಿದ್ಯಾಂ। ಕಾ ಚಾವಿದ್ಯಾ ಯದಾತ್ಮನೋಸ್ಫೂರ್ತಿಃ ॥

ಯಾವುದರಿಂದ ಮೋಕ್ಷವು ಪ್ರಾಪ್ತವಾಗುವುದು ? ದೈವ ಭಕ್ತಿಯಿಂದ.

ದೇವರು ಯಾರು ? ಅಜ್ಞಾನದಿಂದ ನಮ್ಮನ್ನು ತಪ್ಪಿಸುವವನು.

ಅಜ್ಞಾನವಾವುದು ? ಆತ್ಮಸ್ವರೂಪವನ್ನು ಮರೆಸಿರುವುದು.

ಶ್ಲೋ॥ ಕಸ್ಯ ನಶೋಕೋಯಸ್ಸ್ಯಾ। ದಕ್ರೋಧಃ ಕಿಂ ಸುಖಂ ತುಷ್ಟಿಃ ॥ ಕೋರಾಜಾ ರಂಜನಕೃ। ತ್ಕಶ್ಚ ಶ್ವಾ ನೀಚ ಸೇವಕೋಯಸ್ಸ್ಯಾತ್ ॥

ಯಾರಿಗೆ ದುಃಖವಿಲ್ಲ ? ಕೋಪವಿಲ್ಲದವನಿಗೆ.

ಸುಖವಾವುದು ? ತೃಪ್ತಿ.

ಪ್ರಭುವಾರು ? ಪ್ರಜೆಗಳನ್ನು ಸಂತೋಷಪಡಿಸುವವನು.

ನಾಯಿಯಾರು ? ಹೀನರನ್ನು ಸೇವಿಸುವವನು.

ಶ್ಲೋ॥ ಕೋಮಾಯೀ ಪರಮೇಶಃ। ಕಇಂದ್ರಜಾಲಾಯತೇ ಪ್ರಪಂಚೋಽಯಂ ॥ ಕಸ್ಸ್ವಪ್ನನಿಭೋಜಾಗ್ರ। ದ್ವ್ಯವಹಾರಸ್ಸತ್ಯಮಪಿ ಚ ಕಿಂ ಬ್ರಹ್ಮ ॥

ಮಾಯೆಯುಳ್ಳವನಾರು ? ಪರಮೇಶ್ವರನು.

ಇಂದ್ರಜಾಲದಂತಿರುವುದಾವುದು ? ಪ್ರಪಂಚವು.

ಸ್ವಪ್ನಕ್ಕೆ ಸಮಾನವಾದದ್ದಾವುದು ? ಜಾಗ್ರದವಸ್ಥಾ ವ್ಯವಹಾರವು.

ಸತ್ಯಸ್ವರೂಪನಾರು ? ಪರಬ್ರಹ್ಮವು.

ಶ್ಲೋ॥ ಕಿಂ ಮಿಥ್ಯಾ ಯದ್ವಿದ್ಯಾ। ನಾಶ್ಯಂ ತುಚ್ಛಂ ತು ಶಶವಿಷಾಣಾದಿ ॥ ಕಾ ಚಾನಿರ್ವಚನೀಯಾ।ಮಾಯಾ ಕಿಂ ಕಲ್ಪಿತಂ ದ್ವೈತಮ್ ॥

ಮಿಥ್ಯೆಯಾವುದು ? ವಿದ್ಯೆಯಿಂದ ಹೋಗಲಾಡಿಸಲ್ಪಡುವುದು.

ತುಚ್ಛವಾವುದು ? ಮೊಲದ ಕೊಂಬು ಮೊದಲಾದ ಅಸತ್ಪದಾರ್ಥಗಳು.

ಸದಸತ್ತಿಗೆ ವಿಲಕ್ಷಣವಾಗಿ ಅನಿರ್ವಚನೀಯವಾಗಿರುವುದ್ದಾವುದು ? ಮಾಯೆಯು.

ಕಲ್ಪಿಸಲ್ಪಟ್ಟುದಾವುದು ? ದ್ವೈತವು.

ಶ್ಲೋ॥ ಕಿಂ ಪಾರಮಾರ್ಥಿಕಂ ಸ್ಯಾ। ದದ್ವೈತಂ ಅಜ್ಞತಾ ಕುತೋನಾದಿಃ ॥ ವಪುಷಶ್ಚ ಪೋಷಕಂ ಕಿಂ। ಪ್ರಾರಬ್ಧಂ ಚಾನ್ನದಾಯಿ ಕಿಂಚಾಯುಃ ॥

ಪಾರಮಾರ್ಥಿಕವಾವುದು ? ಅದ್ವೈತವು.

ಅಜ್ಞಾನವು ಯಾತರಿಂದುಂಟಾಯಿತು ? ಅನಾದಿಯು.

ಶರೀರವನ್ನು ಕಾಪಾಡುತ್ತಿರುವುದಾವುದು ? ಪ್ರಾರಬ್ಧ ಕರ್ಮವು.

ಅನ್ನವನ್ನಿಡುವದಾವುದು ? ಆಯುಸ್ಸು.

ಶ್ಲೋ॥ ಕೋಬ್ರಾಹ್ಮಣೈರುಪಾಸ್ಯೋ। ಗಾಯತ್ರ್ಯರ್ಕಾಗ್ನಿಗೋಚರಶ್ಶಂಭುಃ ॥ ಗಾಯತ್ರ್ಯಾಮಾದಿತ್ಯೇ ಚಾಗ್ನೌ ಶಂಭೌ ಚ ಕಿನ್ನುತತ್ತತ್ತ್ವಮ್ ॥

ಶ್ಲೋ॥ ಕಾ ದುರ್ಲಭಾ ನರಾಣಾಂ । ಹರಿಭಕ್ತಿಃ ಪಾತಕಂ ಚ ಕಿಂ ಹಿಂಸಾ ॥ ಕೋಹಿ ಭಗವತ್ಪ್ರಿಯಸ್ಸ್ಯಾ । ದ್ಯೋನ್ಯಂನೋದ್ವೇಜಯೇದನುದ್ವಿಗ್ನಃ ॥

ಮನುಷ್ಯರಿಗೆ ಸುಲಭವಲ್ಲದ್ದಾವುದು ? ಭಗವಂತನಲ್ಲಿ ಭಕ್ತಿ.

ಪಾಪವಾವುದು ? ಪ್ರಾಣಿಗಳನ್ನು ಹಿಂಸೆ ಮಾಡುವುದು.

ದೇವರಿಗೆ ಇಷ್ಟನು ಯಾರು ? ತಾನೂ ಕೋಪಮಾಡದೆ ಇತರರಿಗೂ ಕೋಪವನ್ನುಂಟುಮಾಡದೇ ಇರುವವನು.

ಶ್ಲೋ॥ ಕಸ್ಮಾತ್ಸಿದ್ಧಿಸ್ತಪಸೋ । ಬುದ್ಧಿಃ ಕ್ವನು ಭೂಸುರೇ ಕುತೋಬುದ್ಧಿಃ ॥ ವೃದ್ಧೋಪಸೇವಯಾ ಕೇ । ವೃದ್ಧಾ ಯೇ ಧರ್ಮತತ್ತ್ವಜ್ಞಾಃ ॥

ಮನೋಭೀಷ್ಟವು ಯಾವುದರಿಂದ ಸಿದ್ಧಿಸುವುದು ? ತಪಸ್ಸಿನಿಂದ.

ಬುದ್ಧಿ ಯಾರಲ್ಲಿರುವುದು ? ಬ್ರಾಹ್ಮಣರಲ್ಲಿ.

ಯಾವುದರಿಂದ ಬುದ್ಧಿಯುಂಟಾಗುವುದು ? ಹಿರಿಯರನ್ನು ಸೇವಿಸುವುದರಿಂದ.

ಹಿರಿಯರಾರು ? ಧರ್ಮದ ಯಾಥಾರ್ಥ್ಯವನ್ನು ತಿಳಿದವರು.

ಶ್ಲೋ॥ ಸಂಭಾವಿತಸ್ಯ ಮರಣಾ । ದಧಿಕಂ ಕಿಂ ದುರ್ಯಶೋ ಭವತಿ ॥ ಲೋಕೇ ಸುಖೀ ಭವೇತ್ಕೋ । ಧನವಾ ಧನಮಪಿ ಕಿಂ ಯತಶ್ಚೇಷ್ಟಮ್ ॥

ಮಾನವಂತನಿಗೆ ಮರಣಕ್ಕಿಂತಲೂ ದೊಡ್ಡವಾವುದು ? ಅಪಕೀರ್ತಿ.

ಈ ಪ್ರಪಂಚದಲ್ಲಿ ಯಾವನು ಸೌಖ್ಯವನ್ನು ಹೊಂದುವನು ? ದ್ರವ್ಯವಂತನು.

ದ್ರವ್ಯವೆಂದರೇನು ? ಯಾವುದರಿಂದ ತನಗೆ ಇಷ್ಟಸಿದ್ಧಿಯಾಗುವುದೋ ಅದು.

ಶ್ಲೋ॥ ಸರ್ವಸುಖಾನಾಂ ಬೀಜಂ । ಕಿಂ ಪುಣ್ಯಂ ದುಃಖಮಪಿ ಕುತಃ ಪಾಪಾತ್ ॥ ಕಸ್ಯೈಶ್ವರ್ಯಂ ಯಃ ಕಿಲ ಶಂಕರಮಾರಾಧಯೇದ್ಭಕ್ತ್ಯಾ ॥

ಸೌಖ್ಯಗಳೆಲ್ಲಕ್ಕೂ ಮೂಲವಾವುದು ? ಸತ್ಕರ್ಮವು (ಪುಣ್ಯವು).

ಯಾವುದರಿಂದ ದುಃಖವು ಉಂಟಾಗುವುದು ? ಕೆಟ್ಟ ಕೆಲಸದಿಂದ (ಪಾಪಗಳಿಂದ).

ಯಾರಿಗೆ ಸಂಪತ್ತುಂಟಾಗುವುದು ? ಭಕ್ತಿಯಿಂದ ದೇವರನ್ನು ಪೂಜಿಸುವವನಿಗೆ.

ಶ್ಲೋ॥ ಕೋವರ್ಧತೇ ವಿನೀತಃ । ಕೋವಾ ಹೀ ಯೇತಯೇ ವೃತ್ತಃ । ಕೋನ ಪ್ರತ್ಯೇತವ್ಯೋ । ಬ್ರೂತೇ ಯಶ್ಚಾನೃತಂ ಶಶ್ವತ್ ॥

ಅಭಿವೃದ್ಧಿಯನ್ನು ಹೊಂದುವನಾರು ? ವಿನೀತನಾಗಿರುವವನು.

ಯಾವನು ಹೀನಸ್ಥಿತಿಯನ್ನು ಹೊಂದುವನು ? ಗರ್ವಿಷ್ಠನು.

ಯಾರನ್ನು ನಂಬಬಾರದು ? ಸದಾ ಸುಳ್ಳು ಹೇಳುವವರನ್ನು.

ಶ್ಲೋ॥ ಕುತ್ರಾನೃತೇಪ್ಯಪಾಪಂ । ಯಚ್ಚೋಕ್ತಂ ಧರ್ಮರಕ್ಷಾರ್ಥಮ್ ॥ ಕೋಧರ್ಮೋಽಭಿಮತೋಯ । ಶ್ಶಿಷ್ಟಾನಾಂ ನಿಜಕುಲೀನಾನಾಮ್ ॥

ಸುಳ್ಳಾಡಿದರೂ ಯಾವ ಸಂದರ್ಭದಲ್ಲಿ ಪಾಪವಿಲ್ಲ ? ಧರ್ಮವನ್ನು ಕಾಪಾಡುವುದರಲ್ಲಿ.

ಧರ್ಮವಾವುದು ? ಸತ್ಕುಲ ಪ್ರಸೂತರಾದ ಸತ್ಪುರುಷರಿಗೆ ಸಮ್ಮತವಾದುದು.

ಶ್ಲೋ॥ ಸಾಧುಬಲಂ ಕಿಂ ದೈವಂ । ಕಸ್ಸಾಧುಸ್ಸರ್ವದಾ ತುಷ್ಟಃ ॥ ದೈವಂ ಕಿಂ ಯತ್ಸುಕೃತಂ । ಕಸ್ಸುಕೃತೀಶ್ಲಾಘ್ಯತೇ ಚ ಯಸ್ಸದ್ಭಿಃ ॥

ಸತ್ಪುರುಷನಿಗೆ ಬಲವಾವುದು ? ದೇವರು.

ಸತ್ಪುರುಷನಾರು ? ಸದಾ ಸಂತೋಷಚಿತ್ತವುಳ್ಳವನು.

ದೈವವಾವುದು ? ಪುಣ್ಯಕಾರ್ಯವು.

ಪುಣ್ಯವಂತನು ಯಾರು ? ಸತ್ಪುರುಷರಿಂದ ಹೊಗಳಲ್ಪಡುವವನು.

ಶ್ಲೋ॥ ಗೃಹಮೇಧಿನಶ್ಚ ಮಿತ್ರಂ ಕಿಂ । ಭಾರ್ಯಾ ಕೋ ಗೃಹೀ ಚ ಯೋಯಜತೇ ॥ ಕೋಯಜ್ಞೋಯಶ್ಶ್ರುತ್ಯಾ । ವಿಹಿತಶ್ಶ್ರೇಯಸ್ಕರೋನೃಣಾಮ್ ॥

ಗೃಹಸ್ಥನಿಗೆ ಮಿತ್ರರಾರು ? ಹೆಂಡತಿಯು.

ಗೃಹಸ್ಥನಾವನು ? ಯಜ್ಞಮಾಡುವವನು.

ಯಜ್ಞವಾವುದು ? ವೇದವಿಹಿತವು ಮತ್ತು ಶ್ರೇಯಸ್ಕರವು ಆದ ಕರ್ಮವು.

ಶ್ಲೋ ॥ ಕಸ್ಯ ಕ್ರಿಯಾ ಹಿ ಸಫಲಾ । ಯಸ್ಸ್ಯಾಚಾರವಾಂಛಿಷ್ಟಃ ॥ ಕಶ್ಶಿಷ್ಟೋಯೋವೇದ । ಪ್ರಮಾಣವಾನ್ಕೋ ಹತಃ ಕ್ರಿಯಾಭ್ರಷ್ಟಃ ॥

ಆವನ ಕರ್ಮವು ಫಲವುಳ್ಳದ್ದು ? ಸದಾಚಾರಸಂಪನ್ನನಾದ ಆಸ್ತಿಕನ ಕರ್ಮವು.

ಆಸ್ತಿಕನಾವನು ? ವೇದವನ್ನೇ ಪ್ರಮಾಣವಾಗಿ ಉಳ್ಳವನು.

ಸತ್ತವನಾವನು ? ಕರ್ಮಭ್ರಷ್ಟನು.

ಶ್ಲೋ॥ ಕೋಧನ್ಯಸ್ಸನ್ಯಾಸೀ । ಕೋಮಾನ್ಯಃ ಪಂಡಿತಸ್ಸಾಧುಃ ॥ ಕಸ್ಸೇವ್ಯೋಯೋದಾತಾ । ಕೋದಾತಾ ಯೋಽರ್ಥಿತೃಪ್ತಿಮಾತನುತೇ ॥

ಕೃತಾರ್ಥನಾರು ? ಸನ್ಯಾಸಿಯು.

ಶ್ಲೋ || ಕೇನಾಶೋಚ್ಯಃಪುರುಷಃ | ಪ್ರಣತಕಳತ್ರೇಣ ಧೀರವಿಭವೇನ || ಇಹಭುವನೇ ಕಶ್ಶೋಚ್ಯಃ | ಸತ್ಯಪಿ ವಿಭವೇ ನ ಯೋದಾತಾ ||

ಮನುಷ್ಯನು ಯಾವುದರಿಂದ ದುಃಖವಿಲ್ಲದವನಾಗುವನು? ವಿನಯ, ಧೈರ್ಯ ಮತ್ತು ಸಂಪತ್ತುಗಳುಳ್ಳ ಹೆಂಡತಿಯಿಂದ.

ಈ ಲೋಕದಲ್ಲಿ ದುಃಖಗಳಿಗೆ ಪಾತ್ರನಾಗುವವನಾರು ? ಸಂಪತ್ತಿದ್ದರೂ ದಾನಮಾಡದವನು.

ಶ್ಲೋ|| ಕಿಂ ಲಘುತಾಯಾ ಮೂಲಂ | ಪ್ರಾಕೃತಪುರುಷೇಷು ಯಾಯಾಚ್ಞಾ || ರಾಮಾದಪಿ ಕಶ್ಶೂರಃ | ಸ್ಮರಶರನಿಹತೋ ನಯಶ್ಚಲತಿ ||

ಅಗೌರವಕ್ಕೆ ಕಾರಣವೇನು ? ನೀಚರಲ್ಲಿ ಭಿಕ್ಷವನ್ನು ಕೇಳುವಿಕೆ.

ಶ್ರೀರಾಮನಿಗಿಂತಲೂ ಅಧಿಕನಾದ ಶೂರನಾರು ? ಮನ್ಮ ಥನ ಬಾಣದಿಂದ ಹೊಡೆಯಲ್ಪಟ್ಟರೂ ಚಾಂಚಲ್ಯವನ್ನು ಹೊಂದದ ಮನಸ್ಸುಳ್ಳವನು.

ಶ್ಲೋ|| ಕಿಮಹರ್ನಿಶಮನುಚಿಂತ್ಯಂ | ಭಗವಚ್ಚರಣಂ ನ ಸಂಸಾರಃ || ಚಕ್ಷುಷ್ಮಂತೋಽಪ್ಯಂಧಾಃ | ಕೇ ಸ್ಯುರ್ಯೇನಾಸ್ತಿಕಾ ಮನುಜಾಃ ||

ಹಗಲೂ ರಾತ್ರಿಯೂ ಚಿಂತಿಸತಕ್ಕುದಾವುದು ? ಭಗವಂತನ ಪಾದಗಳಲ್ಲದೆ ಐಹಿಕವಿಷಯಗಳಲ್ಲ.

ಕಣ್ಣುಗಳಿದ್ದರೂ ಕುರುಡರಾಗಿರುವವರಾರು ? ನಾಸ್ತಿಕರಾದ ಮನುಷ್ಯರು.

ಶ್ಲೋ|| ಕಃ ಪಂಗುರಿಹ ಪ್ರಥಿತೋ | ವ್ರಜತಿ ಚ ಯೋ ವಾರ್ಧಕೇ ತೀರ್ಥಮ್ || ಕಿಂ ತೀರ್ಥಮಪಿ ಚ ಮುಖ್ಯಂ | ಚಿತ್ತಮಲಂ ಯನ್ನಿವರ್ತಯತಿ ||

ಈ ಲೋಕದಲ್ಲಿ ಪ್ರಸಿದ್ಧನಾದ ಕುಂಟನಾರು ? ಮುದಿತನದಲ್ಲಿ ತೀರ್ಥಯಾತ್ರೆ ಮಾಡುವವನು.

ಅಮೌಲ್ಯವಾದ ತೀರ್ಥವಾವುದು ? ಮನಃಕಲ್ಮಷವನ್ನು ಹೋಗಲಾಡಿಸತಕ್ಕದ್ದು.

ಶ್ಲೋ || ಕಿಂ ಸ್ಮರ್ತವ್ಯಂ ಪುರುಷೈ | ರ್ಹರಿನಾಮ ಸದಾ ನ ಯಾವನೀ ಭಾಷಾ || ಕೋಹಿ ನ ವಾಚ್ಯಸ್ಸುಧೀಯಾ | ಪರ ದೋಷಶ್ಚಾನೃತಂ ತದ್ವತ್ ||

ಮನುಷ್ಯರಿಂದ ಧ್ಯಾನಿಸಲ್ಪಡತಕ್ಕುದಾವುದು ? ನಿರಂತರದಲ್ಲಿಯೂ ಭಗವನ್ನಾಮವು. ಮ್ಲೇಂಛಭಾಷೆಯು ಸ್ಮರಣಯೋಗ್ಯವಲ್ಲವು.

ಬುದ್ಧಿವಂತರಿಂದ ಹೇಳಕೂಡದ್ದಾವುದು ? ಇತರರ ದೋಷವು, ಹಾಗೆಯೇ ಸಟೆಯೂ.

ಶ್ಲೋ|| ಕಿಂ ಸಂಪಾದ್ಯಂ ಮನುಜೈ | ರ್ವಿದ್ಯಾ ವಿತ್ತಂ ಬಲಂ ಯಶಃ ಪುಣ್ಯಮ್ || ಕಸ್ಸರ್ವಗುಣವಿನಾಶೀ | ಲೋಭ ಶ್ಯತ್ರುಶ್ಚ ಕಃ ಕಾಮಃ ||

ಮನುಷ್ಯರಿಂದ ಸಂಪಾದಿಸಲ್ಪಡಬೇಕಾದವು ಯಾವುವು ? ಜ್ಞಾನ, ಧನ, ಶಕ್ತಿ, ಕೀರ್ತಿ ಮತ್ತು ಪುಣ್ಯ.

ಎಲ್ಲಾ ಸುಗುಣಗಳನ್ನೂ ಹಾಳುಮಾಡುವುದಾವುದು ? ಜಿಪುಣತನವು.

ಶತ್ರುವಾರು ? ಕಾಮವು.

ಶ್ಲೋ|| ಕಾ ಚ ಸಭಾ ಪರಿಹಾರ್ಯಾ | ಹೀನಾ ಯಾ ವೃದ್ಧಸಚಿವೇನ || ಇಹ ಕುತ್ರಾವಹಿತಸ್ಸ್ಯಾ | ನ್ಮನುಜಃ ಕಿಲ ರಾಜಸೇವಾಯಾಮ್ ||

ಎಂತಹ ಸಭೆಯನ್ನು ಬಿಡಬೇಕು ? ವೃದ್ಧನಾಗಿ ಅನುಭವಶಾಲಿಯಾದ ಮಂತ್ರಿಯಿಲ್ಲದ ಸಭೆಯನ್ನು.

ಇಹಲೋಕದ ವಿಷಯಗಳಲ್ಲಿ ಮನುಷ್ಯನು ಯಾವುದರಲ್ಲಿ ಜಾಗರೂಕತೆಯಿಂದಿರಬೇಕು ? ಪ್ರಭುವಿನ ಸೇವೆಯಲ್ಲಿ.

ಶ್ಲೋ|| ಪ್ರಾಣಾದಪಿ ಕೋರಮ್ಯಃ | ಕುಲಧರ್ಮಸ್ಸಾಧುಸಂಗಶ್ಚ || ಕಾ ಸಂರಕ್ಷ್ಯಾ ಕೀರ್ತಿಃ | ಪತಿವ್ರತಾ ನೈಜಬುದ್ಧಿಶ್ಚ ||

ಪ್ರಾಣಕ್ಕಿಂತಲೂ ಪ್ರಿಯವಾದುದಾವುದು ? ವಂಶಪರಂಪರಾಗತವಾದ ಕುಲಧರ್ಮವು ಮತ್ತು ಸತ್ಸಂಗ.

ಚನ್ನಾಗಿ ಕಾಪಾಡಲ್ಪಡತಕ್ಕುದಾವುದು ? ಯಶಸ್ಸು, ಪತಿವ್ರತೆಯಾದ ಹೆಂಗಸು, ಸ್ವಾಭಾವಿಕವಾದ ಬುದ್ಧಿ.

ಶ್ಲೋ|| ಕಾ ಕಲ್ಪಲತಾ ಲೋಕೇ ಸಚ್ಛಿಷ್ಯಾಯಾರ್ಪಿತಾ ವಿದ್ಯಾ | ಕೋಽಕ್ಷಯವಟವೃಕ್ಷಸ್ಸ್ಯಾ || ದ್ವಿಧಿವತ್ಸತ್ಪಾತ್ರದತ್ತ ದಾನಂ ಯತ್ ||

ಈ ಲೋಕದಲ್ಲಿ ಕಲ್ಪವೃಕ್ಷದಂತೆ ಕೇಳಿದ್ದನ್ನು ಕೊಡತಕ್ಕುದಾವುದು ? ಉತ್ತಮನಾದ ವಿದ್ಯಾರ್ಥಿಗೆ ಕಲಿಸಿದ ವಿದ್ಯೆಯು.

ನಾಶವಿಲ್ಲದ ಆಲದಮರವಾವುದು ? ವಿಧಿಪ್ರಕಾರವಾಗಿ ಕೊಟ್ಟ ದಾನವು.

ಶ್ಲೋ|| ಕಿಂ ಶಸ್ತ್ರಂ ಸರ್ವೇಷಾಂ | ಯುಕ್ತಿರ್ಮಾತಾಚ ಕಾ ಧೇನುಃ || ಕಿಂ ನು ಬಲಂ ಯದ್ಧೈರ್ಯಂ | ಕೋಮೃತ್ಯುರ್ಯ ದವಧಾನರಹಿತತ್ತ್ವಮ್ ||

ಎಲ್ಲರಿಗೂ ಒಳ್ಳೇ ಆಯುಧವಾವುದು ? ಉಪಾಯವು.

ತಾಯಿಯುಹಾಗೆ ಇರುವುದಾವುದು ? ಹಸುವು.

ಶಕ್ತಿಯಾವುದು ? ಧೈರ್ಯವು.

ಮರಣವಾವುದು ? ಜಾಗರೂಕತೆ ಇಲ್ಲದಿರುವುದು ?

ಶ್ಲೋ || ಕುತ್ರ ವಿಷಂ ದುಷ್ಟಜನೇ | ಕಿಮಿಹಾಶೌಚಂ ಭವೇದೃಣಂ ನೃಣಾಮ್ || ಕಿಮಭಯಮಿಹ ವೈರಾಗ್ಯಂ | ಭಯಮಪಿ ಕಿಂ ವಿತ್ತಮೇವ ಸರ್ವೇಷಾಂ ||

ವಿಷವೆಲ್ಲಿದೆ ? ದುಷ್ಟರಲ್ಲಿ.

ಮನುಷ್ಯರಿಗೆ ಸೂತಕದಂತೆ ಇರುವುದಾವುದು ? ಸಾಲವು.

ಈ ಲೋಕದಲ್ಲಿ ಭಯವಿಲ್ಲದ್ದಾವುದು ? ವೈರಾಗ್ಯವು.

ಎಲ್ಲರಿಗೂ ಭಯವನ್ನುಂಟುಮಾಡುವುದಾವುದು ? ಧನವು.

ಶ್ಲೋ॥ ಕಸ್ಯ ವಶೇ ಪ್ರಾಣಿಗಣ । ಸ್ಸತ್ಯಪ್ರಿಯಭಾಷಿಣೊ ವಿನೀತಸ್ಯ ॥ ಕ್ವ ಸ್ಥಾತವ್ಯಂ ನ್ಯಾಯ್ಯೇ । ಪಥಿ ದೃಷ್ಟಾದೃಷ್ಟ ಲಾಭಾಢ್ಯೇ ॥

ಯಾರಿಗೆ ಎಲ್ಲರೂ ಸ್ವಾಧೀನರಾಗುತ್ತಾರೆ ? ವಿನಯದಿಂದ ಪ್ರಿಯವು ಮತ್ತು ಸತ್ಯವು ಆದ ಮಾತುಗಳನ್ನಾಡುವವರಿಗೆ.

ಯಾವುದರಲ್ಲಿ ಕೊನೇವರಿಗೂ ನಾವು ನಿಲ್ಲಬೇಕು ? ಐಹಿಕಾಮುಷ್ಮಿಕ ಪ್ರಯೋಜನಗಳಿಂದ ಕೂಡಿಕೊಂಡಿರುವ ನ್ಯಾಯವಾದ ಮಾರ್ಗದಲ್ಲಿ.

ಶ್ಲೋ॥ ಕೋಂಧೋಯೋಽಕಾರ್ಯರತಃ । ಕೋಬಧಿರೋಯೋ ಹಿತಾನಿ ನಶೃಣೋತಿ " ೋಮೂಕೋಯಃಕಾಲೇ । ಪ್ರಿಯಾಣಿ ವಕ್ತುಂ ನ ಜಾನಾತಿ ॥

ಕುರುಡನಾರು ? ಟ್ಟ ಕೆಲಸಗಳನ್ನು ಮಾಡುವುದರಲ್ಲಿ ಇಚ್ಛೆಯುಳ್ಳವನು.

ಕಿವುಡನಾರು ? ಕವಾಗುವ ಮಾತನ್ನು ಕೇಳದವನು.

ಮೂಕನಾರು ? ಸವ ದಲ್ಲಿ ಪ್ರಿಯವಾದ ಮಾತುಗಳನ್ನು ಹೇಳುವುದಕ್ಕೆ ತಿಳಿಯ ನು.

ಶ್ಲೋ॥ ಕಿಂ ದಾನಮ ಕಾಂಕ್ಷಂ । ಕಿಂ ಮಿತ್ರಂ ಯನ್ನಿವಾರಯತಿ ಪಾಪಾತ್ ಕೋಽಲಂಕಾರಶ್ಶೀಲಂ । ಕಿಂ ವಾಚಾಂ ಮಂಡನಂ ಸತ್ಯ ॥

ದಾನವಾವುದು ? ಶೆಯಿಲ್ಲದೆ ಕೊಡುವುದು.

ಸ್ನೇಹಿತನಾರು ? ಪಗಳಿಂದ ತಪ್ಪಿಸುವವನು.

ಆಭರಣವಾವುದು ಒಳ್ಳೇ ನಡತೆಯು.

ಮಾತುಗಳಿಗೆ ಭೂ ಣವಾವುದು ? ಸತ್ಯವು.

ಶ್ಲೋ ॥ ವಿದ್ಯುದ್ವಿಲಸಿತಚಪಲಂ । ಕಿಂ ದುರ್ಜನಸಂಗತಿ ರ್ಯುವತಯಶ್ಚ ॥ ಕುಲಶೀಲನಿಷ್ಪ್ರಕಂಪಾಃ । ಕೇ ಕಲಿಕಾಲೇಽಪಿ ಸಜ್ಜನಾಏವ ॥

ಮಿಂಚಿನಂತೆ ಚಂಚಲವಾದುದಾವುದು ? ದುಷ್ಟನ ಸ್ನೇಹವು, ಹೆಂಗಸಿನ ಸಹವಾಸವು.

ಕಲಿಕಾಲದಲ್ಲಿಯೂ ಸಹ ಕುಲಾಚಾರ ಸದ್ವರ್ತನೆಗಳನ್ನು ಬಿಡದವರಾರು ? ಸತ್ಪುರುಷರೇ.

ಶ್ಲೋ॥ ಚಿಂತಾಮಣಿರಿವ ದುರ್ಲಭ । ಮಿಹಕಿಂ ಕಥಯಾಮಿ ತಚ್ಚತುರ್ಭದ್ರಮ್ ॥ ಕಿಂ ತದ್ವದಂತಿ ಭೂಯೋ । ವಿಧೂತತಮಸೋವಿಶೇಷೇಣ ॥

ಈ ಲೋಕದಲ್ಲಿ ಚಿಂತಾಮಣಿಯಂತೆ ದುರ್ಲಭವಾದುದಾವುದು ? ಚತುರ್ಭದ್ರವು.

ಶ್ಲೋ ॥ ದಾನಂ ಪ್ರಿಯವಾಕ್ಸಹಿತಂ । ಜ್ಞಾನಮಗರ್ವಂ ಕ್ಷಮಾನ್ವಿತಂ ಶೌರ್ಯಮ್ ॥ ವಿತ್ತಂ ತ್ಯಾಗಸಮೇತಂ । ದುರ್ಲಭಮೇತಚ್ಚತುರ್ಭದ್ರಮ್ ॥

ಜ್ಞಾನಿಗಳು ಚತುರ್ಭದ್ರವ್ಯಾವುದೆಂದು ಹೇಳುವರು ? ಒಳ್ಳೇ ಮಾತುಗಳಿಂದ ಕೂಡಿದ ದಾನವು, ಅಹಂಕಾರವಿಲ್ಲದ ಜ್ಞಾನವು, ಕ್ಷಮೆಯಿಂದ ಕೂಡಿದ ಶೂರತ್ವವು, ದಾನದಿಂದ ಕೂಡಿದ ಧನವು ಚತುರ್ಭದ್ರಗಳೆಂದು ಹೇಳಲ್ಪಡುವುವು.

ಶ್ಲೋ॥ ಕಿಂ ಶೋಚ್ಯಂ ಕಾರ್ಪಣ್ಯಂ । ಸತಿ ವಿಭವೇ ಕಿಂ ಪ್ರಶಸ್ತಮೌದಾರ್ಯಮ್ ॥ ಕಃ ಪೂಜ್ಯೋವಿದ್ವದ್ಭಿಃ । ಸ್ವಭಾವತ ಸ್ಸರ್ವದಾ ವಿನೀತೋಯಃ ॥

ಶೋಚನೀಯವಾದುದಾವುದು ? ಜಿಪುಣತನವು.

ಭಾಗ್ಯವುಂಟಾಗಿದ್ದಾಗ ಹೊಗಳುವುದಕ್ಕೆ ತಕ್ಕುದಾವುದು ? ದಾತೃತ್ವವು.

ವಿದ್ವಾಂಸರಿಂದ ಪೂಜಿಸಲ್ಪಡಲು ಯೋಗ್ಯನಾರು ? ಸಹಜವಾಗಿ ಯಾವಾಗಲೂ ವಿನಯವುಳ್ಳವನು.

ಶ್ಲೋ ॥ ಕಃ ಕುಲಕಮಲದಿನೇಶಃ । ಸತಿ ಗುಣವಿಭವೇಽಪಿ ಯೋನಮ್ರಃ ॥ ಕಸ್ಯ ವಶೇ ಜಗದೇತತ್ । ಪ್ರಿಯಹಿತವಚನಸ್ಯ ಧರ್ಮನಿರತಸ್ಯ ॥

ತನ್ನ ವಂಶವನ್ನು ಪ್ರಕಾಶಪಡಿಸುವವನಾರು ? ಸುಗುಣಸಂಪತ್ತುಗಳನ್ನುಂಟಾಗಿರುವಾಗಲೂ ನಮ್ರತೆಯುಳ್ಳವನು.

ಈ ಲೋಕವು ಯಾರಿಗೆ ವಶವಾಗುವುದು ? ಧರ್ಮನಿರತನಾಗಿ ಪ್ರಿಯವಾಗಿಯು ಹಿತವಾಗಿಯು ಮಾತನ್ನಾಡುವವನಿಗೆ.

ಶ್ಲೋ॥ ವಿದ್ವನ್ಮನೋಹರಾ ಕಾ । ಸತ್ಕವಿತಾ ಬೋಧವನಿತಾ ಚ ॥ ಕಂ ನ ಸ್ಪೃಶತಿ ವಿಪತ್ತಿಃ । ಪ್ರವೃದ್ಧವಚನಾನುವರ್ತಿನಂದಾಂತಮ್ ॥

ವಿದ್ವಾಂಸರಿಗೆ ಮನೋರಂಜಕವಾವುದು ? ಒಳ್ಳೇ ಕವಿತ್ವವು, ಜ್ಞಾನಾಂಗನೆಯು.

ಆಪತ್ತು ಯಾರನ್ನು ಸೋಂಕುವುದಿಲ್ಲ ? ಹಿರಿಯರ ಮಾತಿನಂತೆ ನಡೆಯುತ್ತಾ ಜಿತೇಂದ್ರಿಯನಾಗಿರುವವನನ್ನು.

ಶ್ಲೋ ॥ ಕಸ್ಮೈ ಸ್ಪೃಹಯತಿ ಕಮಲಾ । ತ್ವನಲಸಚಿತ್ತಾಯ ನೀತಿವೃತ್ತಾಯ ॥ ತ್ಯಜತಿ ಚ ಕಂ ಸಹಸಾ ದ್ವಿಜ । ಗುರುಸುರನಿಂದಾಕರಂ ಚ ಸಾಲಸ್ಯಮ್ ॥

ಲಕ್ಷ್ಮಿಯು ಯಾವನನ್ನು ಅಪೇಕ್ಷಿಸುತ್ತಿರುವಳು ? ಸೋಮಾರಿತನವಿಲ್ಲದೆ ನೀತಿಯಿಂದ ನಡೆದುಕೊಳ್ಳುವವನನ್ನು.

ಮತ್ತಾವನನ್ನು ಲಕ್ಷ್ಮಿಯು ಜಾಗ್ರತೆಯಾಗಿ ಬಿಡುವಳು ? ದೇವಬ್ರಾಹ್ಮಣಗುರುದೂಷಕನನ್ನು ಮತ್ತು ಸೋಮಾರಿಯನ್ನು.

ಶ್ಲೋ॥ ಕುತ್ರವಿಧೇಯೋವಾಸಃ । ಸಜ್ಜನನಿಕಟೇಽಥವಾ ಕಾಶ್ಯಾಮ್ ॥ ಕಃ ಪರಿಹಾರ್ಯೋದೇಶಃ । ಪಿಶುನವತೋಲುಬ್ಧಭೂಪಸ್ಯ ॥

ನಾವು ವಾಸಮಾಡಬೇಕಾದ ಸ್ಥಳವಾವುದು ? ಸತ್ಪುರುಷರ ಸಹವಾಸದಲ್ಲಿ ಅಥವಾ ಕಾಶಿಯಂಥ ಪುಣ್ಯಕ್ಷೇತ್ರಗಳಲ್ಲಿ.

ಯಾವ ಸ್ಥಳವು ಬಿಡಲ್ಪಡತಕ್ಕುದು ? ಚಾಡೀಮಾತನ್ನು ಕೇಳುವ ಮತ್ತು ಜಿಪುಣಸ್ವಭಾವ ರಾಜನ ದೇಶವು.

ತಿಳಿಯುವುದಕ್ಕೆ ಸಾಧ್ಯವಲ್ಲದ್ದು ಯಾವುದು ? ಹೆಂಗಸರ ನಡತೆಯು.

ಚತುರನು ಯಾರು ? ಹೆಂಗಸರ ನಡತೆಯಿಂದ ಭಂಗಿಸಲ್ಪಡದವನು.

ದುಃಖವಾವುದು ? ಸಂತೋಷವಿಲ್ಲದಿರುವುದು.

ಲಾಘವವಾವುದು ? ನೀಚರನ್ನು ಯಾಚಿಸುವುದು.

ಶ್ಲೋ || ಕಿಂ ಜೀವಿತಮನವದ್ಯಂ | ಕಿಂ ಜಾಡ್ಯಂ ಪಾಠತೋಽಪ್ಯನಭ್ಯಾಸಃ ||ಕೋಜಾಗರ್ತಿ ವಿವೇಕೀ | ಕಾ ನಿದ್ರಾ ಮೂಢತಾ ಜಂತೋಃ ||

ಜೀವಿತವಾವುದು ? ದೋಷರಹಿತವಾದದ್ದು.

ಜಡತ್ವವಾವುದು ? ಪಾಠವನ್ನು ಚಿಂತನೆಮಾಡದಿರುವುದು.

ಎಚ್ಚರಿಕೆಯುಳ್ಳವನಾರು ? ವಿವೇಕಿಯು.

ಪ್ರಾಣಿಗಳಿಗೆ ನಿದ್ರೆಯಾವುದು ? ಮೂಢತ್ವವು.

ಶ್ಲೋ || ನಳಿನೀದಳಗತಜಲವ | ತ್ತರಳಂ ಕಿಂ ಯೌವನಂ ಧನಂ ಚಾಯುಃ || ಕಥಯ ಪುನಃ ಕೇ ಶಶಿನಃ | ಕಿರಣಸಮಾಸ್ಸಜ್ಜನಾಏವ ||

ತಾವರೆ ಎಲೆಯ ಮೇಲಿನ ನೀರಿನಂತೆ ಚಂಚಲವಾದುದಾವುದು ? ಯೌವನ, ಧನ, ಆಯುಸ್ಸು.

ಚಂದ್ರನ ಕಿರಣಗಳಿಗೆ ಸಮಾನರಾರು ? ಸತ್ಪುರುಷರು.

ಶ್ಲೋ|| ಕೋನರಕಃ ಪರವಶತಾ | ಕಿಂ ಸೌಖ್ಯಂ ಸರ್ವಸಂಗವಿರತಿರ್ಯಾ || ಕಿಂ ಸತ್ಯಂ ಭೂತಹಿತಂ | ಪ್ರಿಯಂಚ ಕಿಂ ಪ್ರಾಣಿನಾಮಸವಃ ||

ನರಕವಾವುದು ? ಇತರರ ಅಧೀನದಲ್ಲಿರುವುದು.

ಸುಖವಾವುದು ? ಸರ್ವಸಂಗಪರಿತ್ಯಾಗ.

ಸತ್ಯವಾವುದು ? ಪ್ರಾಣಿಗಳಿಗೆ ಹಿತವನ್ನುಂಟುಮಾಡುವುದು.

ಪ್ರಾಣಿಗಳಿಗೆ ಇಷ್ಟವಾದುದಾವುದು ? ಪ್ರಾಣಗಳು.

ಶ್ಲೋ|| ಕೋನರ್ಥಫಲೋಮಾನಃ ಕಾ ಸುಖದಾ ಸಾಧುಜನಮೈತ್ರೀ || ಸರ್ವವ್ಯಸನವಿನಾಶೇ | ಕೋದಕ್ಷಸ್ಸರ್ವಥಾತ್ಯಾಗೀ ||

ಕೆಟ್ಟದ್ದನ್ನೇ ಉಂಟುಮಾಡತಕ್ಕದ್ದಾವುದು ? ಗರ್ವವು.

ಸೌಖ್ಯವನ್ನು ಕೊಡತಕ್ಕುದಾವುದು ? ಸತ್ಪುರುಷರ ಸ್ನೇಹವು.

ಎಲ್ಲಾ ದುಃಖಗಳನ್ನೂ ಹೋಗಲಾಡಿಸಿಕೊಳ್ಳುವುದರಲ್ಲಿ ಛಟ್ಟಿಗನಾವನು ? ವಿರಕ್ತಿಯುನ್ನು ಹೊಂದಿರುವವನು.

ಶ್ಲೋ|| ಕಿಂ ಮರಣಂ ಮೂರ್ಖತ್ವಂ| ಕಿಂ ಚಾನರ್ಘ್ಯಂ ಯದವಸರೇ ದತ್ತಂ || ಆಮರಣಾತ್ಕಿಂ ಶಲ್ಯಂ | ಪ್ರಚ್ಛನ್ನಂ ಯತ್ಕೃತಂ ಪಾಪಂ ||

ಮರಣವಾವುದು ? ಮೂರ್ಖನಾಗಿರುವುದು.

ಬೆಲೆಯಿಲ್ಲದ್ದಾವುದು ? ಸಮಯದಲ್ಲಿ ಕೊಡಲ್ಪಟ್ಟುದು.

ಸಾಯುವವರೆಗೂ ಮುಳ್ಳಿನಂತೆ ಚುಚ್ಚುವುದಾವುದು ? ಗುಟ್ಟಾಗಿ ಮಾಡಿದ ಪಾಪದ ಕೆಲಸವು.

ಶ್ಲೋ|| ಕುತ್ರ ವಿಧೇಯೋಯತ್ನೋ | ವಿದ್ಯಾಭ್ಯಾಸೇ ಸದೌಷಧೇ ದಾನೇ || ಅವಧೀರಣಾ ಕ್ವ ಕಾರ್ಯಾ | ಖಲಪರಯೋಷಿತ್ಪರಧನೇಷು ||

ನಾವು ಯಾವ ವಿಷಯದಲ್ಲಿ ಯತ್ನಮಾಡಬೇಕು ? ವಿದ್ಯಾಭ್ಯಾಸದಲ್ಲಿ ; ಒಳ್ಳೇ ಔಷಧಿ ತೆಗೆದುಕೊಳ್ಳುವುದರಲ್ಲಿ ; ದಾನಮಾಡುವುದರಲ್ಲಿ.

ಯಾವುದನ್ನು ತಿರಸ್ಕಾರಮಾಡಬೇಕು ? ದುಷ್ಟಜನರನ್ನು, ಪರಸ್ತ್ರೀಯರನ್ನು, ಪರಧನವನ್ನು.

ಶ್ಲೋ || ಕಾಹರ್ನಿಶಮನುಚಿಂತ್ಯಾ | ಸಂಸಾರಾಸಾರತಾನತು ಪ್ರಮದಾ || ಕಾ ಪ್ರೇಯಸೀ ವಿಧೇಯಾ | ಕರುಣಾದೀನೇಷು ಸಜ್ಜನೇ ಮೈತ್ರೀ ||

ರಾತ್ರೀಹಗಲೂ ಚಿಂತಿಸಲ್ಪಡತಕ್ಕುದಾವುದು ? ಸಂಸಾರದ ಅಸಾರತೆಯನ್ನಲ್ಲದೆ, ಸ್ತ್ರೀಯರ ವಿಷಯವನ್ನು ಚಿಂತಿಸತಕ್ಕುದಲ್ಲ.

ಇಷ್ಟವಾಗಿ ಮಾಡಲ್ಪಡತಕ್ಕುದಾವುದು ? ದೀನರಲ್ಲಿ ದಯೆಯೂ, ಸತ್ಪುರುಷರಲ್ಲಿ ಸ್ನೇಹವೂ.

ಶ್ಲೋ|| ಕಂಠಗತೈರಪ್ಯಸುಭಿಃ | ಕಸ್ಯ ಹ್ಯಾತ್ಮಾ ನ ಶಕ್ಯತೇ ಜೇತುಮ್ || ಮೂರ್ಖಸ್ಯ ಶಂಕಿತಸ್ಯ ಚ | ವಿಷಾದಿನೋವಾ ಕೃತಘ್ನಸ್ಯ ||

ಸಾವಿನಸ್ಥಿತಿಗೆ ತಂದರೂ ಮಾರ್ಗಕ್ಕೆ ಬರದವರಾರು ? ಮೂರ್ಖನು, ಸಂಶಯಗ್ರಸ್ತನು, ದುಃಖಪಡುವವನು, ಉಪಕಾರವನ್ನು ಮರೆವ ಕೃತಜ್ಞನು.

ಶ್ಲೋ || ಕಸ್ಸಾಧುಸ್ಸದ್ವೃತ್ತಃ | ಕಮಧಮಮಾಚಕ್ಷತೇ ತ್ವಸದ್ವೃತಮ್ || ಕೇನ ಜಿತಂ ಜಗದೇತ | ತ್ಸತ್ಯ ತಿತಿಕ್ಷಾವತಾ ಪುಂಸಾ ||

ಸತ್ಪುರುಷನು ಯಾರು ? ಒಳ್ಳೇ ನಡತೆಯುಳ್ಳವನು.

ಎಂಥವನನ್ನು ನೀಚನೆಂದು ಹೇಳುವರು ? ಕೆಟ್ಟ ನಡತೆಯುಳ್ಳವನನ್ನು.

ಈ ಲೋಕವು ಯಾರಿಂದ ಗೆಲ್ಲಲ್ಪಡುವುದು ? ಸತ್ಯ ಮತ್ತು ಸಹನೆಯುಳ್ಳ ಪುರುಷನಿಂದ.

ಶ್ಲೋ|| ಕಸ್ಮೈ ನಮಾಂಸಿ ದೇವಾಃ | ಕುರ್ವಂತಿ ದಯಾಪ್ರಧಾನಾಯ || ಕಸ್ಮಾದುದ್ವೇಗಸ್ಸ್ಯಾ | ತ್ಸಂಸಾರಾರಣ್ಯತಸ್ಸುಧಿಯಃ ||

ದೇವತೆಗಳು ಕೂಡ ಯಾರಿಗೆ ನಮಸ್ಕರಿಸುವರು ? ಭೂತದಯಾಪರನಿಗೆ.

ಬುದ್ಧಿವಂತರೂ ಕೂಡ ಯಾವುದಕ್ಕೆ ಭಯಪಡುವರು ? ಸಂಸಾರವೆಂಬ ಅರಣ್ಯಕ್ಕೆ.

ಪ್ರಶ್ನೋತ್ತರ ರತ್ನಮಾಲಿಕೆ.

(ಶ್ರೀಮಚ್ಛಂಕರಭಗವತ್ಪಾದರವರಿಂದ ಪ್ರಣೀತವಾದದ್ದು)

ಓಂ|| ಕಃ ಖಲುನಾಂಲಂಕ್ರಿಯತೇ | ದೃಷ್ಟಾದೃಷ್ಟಾರ್ಥಸಾಧನಪಟೀಯಾನ್ || ಅಮುಯಾಕಂಠಸ್ಥಿತಯಾ | ಪ್ರಶ್ನೋತ್ತರ ರತ್ನಮಾಲಿಕಯಾ ||

ಇಹಪರ ಪ್ರಯೋಜನಗಳನ್ನು ಸಾಧಿಸುವುದರಲ್ಲಿ ಸಮರ್ಥನಾದವರಾರು ? ಮಾಲಿಕೆಯಂತೆ ಜೋಡಿಸಲ್ಪಟ್ಟ ಉತ್ತಮವಾದ ಈ ಪ್ರಶ್ನೋತ್ತರಗಳನ್ನು ಮನಸ್ಸಿಗೆ ತಂದುಕೊಂಡು ಅದರಂತೆ ಆಚರಿಸತಕ್ಕವನು.

ಶ್ಲೋ|| ಭಗವನ್ಕಿಮುಪಾದೇಯಂ | ಗುರುವಚನಂ ಹೇಯಮಪಿ ಚ ಕಿಮಕಾರ್ಯಮ್ || ಕೋಗುರುರಧಿಗತತತ್ತ್ವ | ಶಿಷ್ಯಹಿತಾಯೋದ್ಯತಸ್ಸತತಮ್ ||

ಅಂಗೀಕರಿಸುವುದಕ್ಕೆ ಅರ್ಹವಾದುದಾವುದು ? ಗುರುವಚನವು.

ಬಿಡಬೇಕಾದುದಾವುದು ? ಮಾಡಬಾರದ ಕೆಲಸವು.

ಗುರುವು ಎಂಥವನು ? ಸತ್ಯವನ್ನು ತಿಳಿದವನು ಮತ್ತು ಶಿಷ್ಯನ ಶ್ರೇಯಸ್ಸಿಗಾಗಿ ಯಾವಾಗ್ಲೂ ಪ್ರಯತ್ನಿಸುವವನು.

ಶ್ಲೋ|| ತ್ವರಿತಂ ಕಿಂ ಕರ್ತವ್ಯಂ | ವಿದುಷಾಂ ಸಂಸಾರಸಂತತಿಚ್ಛೇದಃ || ಕಿಂ ಮೋಕ್ಷತರೋರ್ಬೀಜಂ | ಸಮ್ಯಕ್‌ಜ್ಞಾನಂ ಕ್ರಿಯಾಸಿದ್ಧಮ್ ||

ವಿವೇಕಿಗಳಿಂದ ಶೀಘ್ರವಾಗಿ ಆಚರಿಸಲ್ಪಡಬೇಕಾದ ಕಾರ್ಯವಾವುದು ? ಜನ್ಮಗಳಿಂದ ಬಿಡುಗಡೆ.

ಕೈವಲ್ಯವೆಂಬ ಗಿಡಕ್ಕೆ ಬೀಜವಾವುದು ? ಸತ್ಕರ್ಮಗಳಿಂದ ಸಾಧ್ಯವಾದ ಸುಜ್ಞಾನ.

ಶ್ಲೋ || ಕಃ ಪಥ್ಯತರೋಧರ್ಮಃ | ಕಶ್ಶುಚಿರಿಹಯಸ್ಯ ಮಾನಸಂಶುದ್ಧಮ್ || ಕಃ ಪಂಡಿತೋವಿವೇಕೀ | ಕಿಂ ವಿಷಮವಧೀರಣಾ ಗುರುಷು ||

ಮೇಲನ್ನು ಮಾಡುವ ಮಾರ್ಗವಾವುದು ? ಧರ್ಮವು.

ಈ ಪ್ರಪಂಚದಲ್ಲಿ ಪರಿಶುದ್ಧನು ಯಾರು ? ಯಾರ ಮನಸ್ಸು ಶುದ್ಧವಾಗಿರುವುದೋ ಅವನು.

ವಿದ್ವಾಂಸನು ಯಾರು ? ಯುಕ್ತಾಯುಕ್ತ ಪರಿಜ್ಞಾನವನ್ನು ಹೊಂದಿರುವವನು.

ವಿಷವಾವುದು ? ಗುರುಗಳಲ್ಲಿ ತಿರಸ್ಕಾರ ಬುದ್ಧಿ.

ಶ್ಲೋ|| ಕಿಂ ಸಂಸಾರೇ ಸಾರಂ | ಬಹುಶೋಽಪಿ ವಿಚಿಂತ್ಯಮಾನಮಿದಮೇವ || ಕಿಂ ಮನುಜೇಷ್ವಿಷ್ಟತಮಂ | ಸ್ವಪರಹಿತಾಯೋದ್ಯತಂ ಜನ್ಮ ||

ಸಂಸಾರದಲ್ಲಿ ಸಾರವಾದದ್ದು ಯಾವುದು ? ಈ ಸಂಸಾರದಲ್ಲಿ ಏನು ಸಾರವು ? ಎಂದು ಚಿಂತಿಸುವುದೇ !

ಮನುಷ್ಯರಿಂದ ಹೆಚ್ಚಾಗಿ ಅಪೇಕ್ಷಿತವಾದುದಾವುದು ? ತಮ್ಮ ಮತ್ತು ಪರರ ಹಿತಕ್ಕಾಗಿ ಯತ್ನಿಸುವಂಥ ಜನ್ಮವು.

ಶ್ಲೋ|| ಮದಿರೇವ ಮೋಹಜನಕಃ | ಕಸ್ಸ್ನೇಹಃ ಕೇಚಿದಸ್ಯವೋವಿಷಯಾಃ || ಕಾ ಭವವಲ್ಲೀ ತೃಷ್ಣಾ | ಕೋವೈರೀ ಯಸ್ತ್ವನುದ್ಯೋಗಃ ||

ಹೆಂಡದಂತೆ ಭ್ರಾಂತಿಯನ್ನು ಹುಟ್ಟಿಸುವುದಾವುದು ? ಲೌಕಿಕ ವಿಷಯಗಳಲ್ಲಿ ಅತ್ಯಧಿಕ ಪ್ರೀತಿಯು.

ಸಂಸಾರದ ಬಳ್ಳಿ ಯಾವುದು ? ಆಶೆ.

ಶತ್ರುವಾರು ? ನಿರುದ್ಯೋಗವು.

ಶ್ಲೋ || ಕಸ್ಮಾದ್ಭಯಮಿಹ ಮರಣಾ | ದಂಧಾದಪಿ ಕೋವಿಶಿಷ್ಯತೇ ರಾಗೀ || ಕಶ್ಶೂರೋಯೋಲಲನಾ | ಲೋಚನಬಾಣೈರ್ನ ಚವ್ಯಥಿತಃ ||

ಈ ಪ್ರಪಂಚದಲ್ಲಿ ಭಯವ್ಯಾರಿಂದ ? ಮರಣದಿಂದ.

ಕುರುಡನಿಗಿಂತ ಕಣ್ಣುಕಾಣದವನಾರು ? ಧನ, ದಾರಾ, ಪುತ್ರಾದಿಗಳಲ್ಲಿ ಅಧಿಕಾಶೆಯನ್ನು ಹೊಂದಿರುವವನು.

ಶೂರನಾರು ? ಹೆಂಗಸರ ಕಡೆಗಣ್ಣಿನ ನೋಟವೆಂಬ ಬಾಣದಿಂದ ಬಾಧಿಸಲ್ಪಡದವನು.

ಶ್ಲೋ|| ಪಾತುಂ ಕರ್ಣಾಂಜಲಿಭಿಃ | ಕಿಮಮೃತಮಿವ ಯುಜ್ಯತೇ ಸದುಪದೇಶಃ || ಕಿಂ ಗುರುತಾಯಾ ಮೂಲಂ | ಯದೇತದಪ್ರಾರ್ಥನಂ ನಾಮ ||

ಕಿವಿಗಳೆಂಬ ಸೇರೆಗಳಿಂದ ಕುಡಿಯುವುದಕ್ಕೆ ಅಮೃತದಂತೆ ಇರುವುದಾವುದು ? ಸತ್ಪುರುಷರ ಉಪದೇಶವು.

ಗೌರವಕ್ಕೆ ಕಾರಣವಾವುದು ? ಯಾಚಿಸದಿರುವುದು.

ಶ್ಲೋ || ಕಿಂ ಗಹನಂ ಸ್ತ್ರೀಚರಿತಂ | ಕಶ್ಚತುರೋಯೋನಖಂಡಿತಸ್ತೇನ || ಕಿಂ ದುಃಖಮಸಂತೋಷಃ | ಕಿಂ ಲಾಘವಮಧಮತೋಯಾಚ್ಞಾ ||

ಅಮೃತವಾಣಿ

(ಶ್ರೀಮನ್ನಿಜಗುಣ ಶಿವಯೋಗಿಗಳಿಂದ ಪ್ರಣೀತವಾದದ್ದು)

ರಾಗ—ಪಹಡಿ.

ಜ್ಞಾನಿಯಿಂದವನರಿಯೆವೆಂಬರನು | ಮಾನವೇಕವನಂಗ ತಾನೆ ಸೂಚಿಸುತಿದೆ ||ಪ||

ಜ್ಞಾನಿಯ ಲಕ್ಷಣವನ್ನು ತಿಳಿಯಲಾರೆವು ಎಂದು ಹೇಳುತ್ತಾರೆ. ಇದಕ್ಕೆ ಸಂದೇಹವೇತಕ್ಕೆ? ಅವನ ಅಂಗವೇಷ್ಟೆಅದನ್ನು ತೋರಿಸುತ್ತದೆ. || ಪಲ್ಲವಿ ||

ಹಿತವಿದಹಿತವೆಂಬ ತಿಳಿವಿಗೆ ವಿಷಯ ವಿ | ರತಿಯೆ ಸೂಚನೆ ವಿರತಿಗೆ ವಿಶ್ವದ || ನುತಿವೆತ್ತ ಶಮೆ ತಾನೆ ಸೂಚನೆ ಶಮೆಗೆ ಸ | ನ್ಮತವಾದ ಪರಮುಕ್ತಿಪದದೊಲುಮೆ ಸೂಚನೆ ||೧||

ಇದು ಹಿತ ಇದು ಅಹಿತ ಎಂಬ ತಿಳಿವಳಿಕೆಯು ಬಂದದ್ದಕ್ಕೆ ವಿಷಯಗಳಲ್ಲಿ ವೈರಾಗ್ಯವೇ ಗುರುತು. ವೈರಾಗ್ಯ ಬಂದದ್ದಕ್ಕೆ ಮನೋನಿಗ್ರಹವೇ ಗುರುತು. ಮನೋನಿಗ್ರಹಕ್ಕೆ ಮೋಕ್ಷದಲ್ಲಿ ಅಪೇಕ್ಷೆಯಿರುವುದೇ ಗುರುತು. ||೧||

ಪರಮುಕ್ತಿಯೊಲುಮೆಗೆ ಗುರುಸೇವೆ ಸೂಚನೆ | ಗುರುಪಾದ ಸೇವೆಗೆ ವೇದಾರ್ಥ ಸೂಚನೆ || ವರವೇದಾರ್ಥಕೆ ಶರೀರಾದಿ ನೇತಿಯೆ ಸೂಚನೆ | ಶರೀರಾದಿ ನೇತಿಗೆ ತಾನಾರೆಂಬುದೆ ಸೂಚನೆ ||೨||

ಮೋಕ್ಷದಲ್ಲಿ ಅಪೇಕ್ಷೆ ಇರುವದಕ್ಕೆ ಸದ್ಗುರುವಿನ ಸೇವೆಯನ್ನು ಮಾಡುವುದೇ ಗುರುತು. ಗುರುಪಾದಸೇವೆಗೆ ವೇದಾರ್ಥವನ್ನು ತಿಳಿದಿದ್ದೇ ಗುರುತು. ವೇದಾರ್ಥವನ್ನು ತಿಳಿದಿದ್ದಕ್ಕೆ ದೇಹಾದಿಗಳು ನಾನಲ್ಲ ಎಂಬ ತಿಳಿವಳಿಕೆಯೇ ಗುರುತು. ದೇಹಾದಿಗಳು ನಾನಲ್ಲ ಎಂಬ ತಿಳಿವಳಿಕೆಗೆ ತಾನು ಯಾರು ಎಂಬುದಾಗಿ ವಿಚಾರಮಾಡುವುದೇ ಗುರುತು ||೨||

ಆರುನಾನೆಂಬುದಕ್ಕೆ ಸೋಹಂಭಾವನೆ ಸೂಚನೆ ವಿ | ಚಾರಿತ ಸೋಹಂ ಭಾವನೆಗೆ ಹವಣಿಸದ || ಸಾರಸುಖ ಸೂಚನೆ ಸುಖಕೆ ನಿತ್ಯ ನಿಜ ನಿರ್ವಿ | ಕಾರ ಗುರುಶಂಭುಲಿಂಗವಾಗಿಹುದೆ ಸೂಚನೆ ||೩||

ತಾನು ಯಾರು ಎಂದು ವಿಚಾರಮಾಡಿದ್ದಕ್ಕೆ ಸೋಹಂ ಅಂದರೆ ಆ ಪರಬ್ರಹ್ಮವೇ ನಾನು ಎಂಬ ಭಾವನೆಯೇ ಗುರುತು. ವಿಚಾರದಿಂದ ಉಂಟಾದ ಸೋಹಂಭಾವಕ್ಕೆ ನಿತ್ಯಾನಂದವನ್ನು ಅನುಭವಿಸುವುದೇ ಗುರುತು. ನಿತ್ಯಾನಂದವನ್ನು ಅನುಭವಿಸುವುದಕ್ಕೆ ನಿತ್ಯನು ಮತ್ತು ನಿರ್ವಿಕಾರನು ಆದ ಶಂಭುಲಿಂಗವು ತಾನಾಗಿರುವುದೇ ಗುರುತು ||೩||

ರಾಗ—ಸೌರಾಷ್ಟ್ರ

ಎಂದಿನಂತೆ ಜೀವ ಭಾವವಿರಲು ನಿಜನಿಗಮ ಗುರು | ವಿಂದರಿದೊಡೇನು ಮುಕ್ತಿಸುಖಸಾಧ್ಯವಹುದೆ || ಪ ||

ಮೊದಲಿನಂತೆ ಜೀವಭಾವವಿರುವಾಗ ಶ್ರುತಿಗುರುಗಳ ಉಪದೇಶದಿಂದ ಮೋಕ್ಷದ ಸುಖವು || ಸಾಧ್ಯವಾಗುವುದಿಲ್ಲ || ಪಲ್ಲವಿ||

ಎಂದಿನಂತೆ ಕಾಮವೆಂದಿನಂತೆ ಕೋಪವತಿ ಲೋಭ | ವೆಂದಿನಂತೆ ಮದ ಮೋಹ ಮತ್ಸರ ನಿಕರ || ಎಂದಿನಂತೆ ಭಯ ಶೋಕವೆಂದಿನಂತೆ ಮೂರವಸ್ಥೆ | ಯೆಂದಿನಂತೆ ತೋರ್ಪ ಹಸಿವು ತೃಷೆಗಳಿರುತಿರಲು ||೧||

ಮೊದಲಿನಂತೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಅರಿಷಡ್ವರ್ಗಗಳು ಮತ್ತು ಎಂದಿನಂತೆ ಭಯ, ದುಃಖ, ಮೂರವಸ್ಥೆಗಳು, ಹಸಿವು, ಬಾಯಾರಿಕೆ ಇರಲು ||೧||

ಎಂದಿನಂತೆ ದೇಶ ಕಾಲ ಗತಿ ದೇಹದಭಿಮಾನ | ವೆಂದಿನಂತೆ ಕುಲ ಜಾತಿ ನಾಮರೂಪಗಳು || ಎಂದಿನಂತೆ ಜಗವಾರು ವಿಕೃತಿ ಸಂಸರಣ ವಿ | ದೆಂದಿನಂತೆ ಕರ್ಮವಿಹಪರದೊಲವಿರಲು ||೨||

ಮೊದಲಿನಂತೆ ದೇಶಕಾಲಗತಿಗಳು, ದೇಹಾಭಿಮಾನ, ಕುಲ ಜಾತಿ ನಾಮರೂಪಗಳು, ಎಂದಿನಂತೆ ಜಗತ್ತು, ಅಸ್ತಿ (ಇರುತ್ತದೆ), ಜಾಯತೇ (ಹುಟ್ಟುತ್ತದೆ), ವರ್ಧತೆ (ಬೆಳೆಯುತ್ತದೆ), ವಿಪರಿಣಮತೇ (ಬದಲಾವಣೆಯನ್ನು ಹೊಂದುತ್ತದೆ), ಅಪಕ್ಷೀಯತೇ (ಕ್ಷೀಣವಾಗುತ್ತದೆ) ಮತ್ತು ವಿನಶ್ಯತಿ (ನಾಶವನ್ನು ಹೊಂದುತ್ತದೆ) ಎಂಬ ಆರು ವಿಕಾರಗಳು, ಎಂದಿನಂತೆ ಹುಟ್ಟುವುದು ಮತ್ತು ಸಾಯುವುದು, ಎಂದಿನಂತೆ ಫಲದಾಶೆಯಿಂದ ಕರ್ಮವನ್ನು ಮಾಡುವದು, ಎಂದಿನಂತೆ ಇಹಪರಭೋಗಗಳಲ್ಲಿ ಇಚ್ಛೆ ಇರಲು ||೨||

ಎಂದಿನಂತೆ ನವಗುಣವೆಂದಿನಂತೆ ಮಮಕಾರ | ವೆಂದಿನಂತೆ ನಿಂದೆ ವಂದನೆ ಕುಂದು ಕುಶಲ || ವೆಂದಿನಂತೆ ತೋರುವಿವರಿಂದೆ ವಿಲಕ್ಷಣವಾದಾ | ನಂದ ಬೋಧಾಂಬುಧಿ ಶಂಭುಲಿಂಗವಾಗಿರದೆ ||೩||

ಎಂದಿನಂತೆ ನವಗುಣವು (ಸಾತ್ವೀಕ, ರಾಜಸ, ತಾಮಸವೆಂಬ ಮೂರು ಗುಣಗಳಲ್ಲಿ ಒಂದೊಂದರಲ್ಲಿ ಮೂರು ಮೂರು ಗುಣಗಳು ಸೇರಿ ನವಗುಣವೆನಿಸುವುದು), ಎಂದಿನಂತೆ ನನ್ನದು ಎಂಬ ಮಮತೆ, ಎಂದಿನಂತೆ ಅನ್ಯರನ್ನು ನಿಂದಿಸುವುದು, ತನ್ನನ್ನು ಸ್ತೋತ್ರಮಾಡಿಕ್ಕೊಳ್ಳುವದು, ಎಂದಿನಂತೆ ಹೆಚ್ಚು ಕಡಮೆ ತೋರುತ್ತ ವಿಲಕ್ಷಣವಾದ ಆನಂದ ಸಮುದ್ರವಾಗಿರುವ ಶಂಭುಲಿಂಗವಾಗಿರದೆ ಇರುವುದು. ||೩||

ರ್ಣವಿರುತ್ತದೆ ಮತ್ತು ದ್ವೈತವನ್ನು ನಿಷೇಧಿಸಿ ಅದ್ವೈತವನ್ನು ಶಂಸಿಸಿರುತ್ತದೆ ಎಂದು ಬ್ರಹ್ಮಾತ್ಮದಲ್ಲೇ ತಾತ್ಪರ್ಯವನ್ನು ರ್ಣಯಿಸುವ ಬುದ್ಧಿಯೇ ಶ್ರವಣವೆನಿಸುತ್ತದೆ. 'ಯುಕ್ತ್ಯಾ ಭಾವಿತತ್ವಾನುಸಂಧಾನಂ ಮನನಂತು ತತ್' ಎಂಬ ವಚನ ತೆ ತಾನು ಕೇಳಿದ ವೇದಾಂತಾರ್ಥದಲ್ಲಿ ಬರುವ ಸಂಶಯ ಲ್ಲವನ್ನೂ ಯುಕ್ತಿಪ್ರಮಾಣಗಳಿಂದ ತಳ್ಳಿಹಾಕಿ ಅನುಕೂಲ ಾಸತ್ಮಕ ಜ್ಞಾನವನ್ನುಂಟುಮಾಡುವ ಚಿಂತನೆಯೇ ಮನನ ನಿಸಿಕೊಳ್ಳಲ್ಪಡುವದು. 'ತಾಭ್ಯಾಂ ನಿರ್ವಿಚಿಕಿತ್ಸೇರ್ಥೇ ತಸಃ ಸ್ಥಾಪಿತಸ್ಯ ಯತ್ । ಏಕತಾನತ್ವಮೇತದ್ಧಿ ನಿಧಿಧ್ಯಾ ಮುಚ್ಯತೇ ॥' ಎಂಬ ವಚನದಂತೆ ಶ್ರವಣಮನನಗಳಿಂದ ಶಯರಹಿತವಾದ ಅರ್ಥವು ತೋರಿದಮೇಲೆ ಆ ವಸ್ತುವಿ ಲ್ಲೇ ಮನಸ್ಸನ್ನು ಸ್ಥಾಪಿಸಿ ಏಕಾಗ್ರತೆಯಿಂದ ಧ್ಯಾನಮಾಡ್ಡ ಯು ನಿಧಿಧ್ಯಾಸನವೆನ್ನಿಸಿಕೊಳ್ಳುತ್ತದೆ. 'ಬಹುಜನ್ಮದೃ ಭ್ಯಾಸಾದ್ದೇಹಾದಿಷ್ವಾತ್ಮಧೀಃಕ್ಷಣಾತ್ । ಪುನಃ ಪುನರುದೇ ವಂ ಜಗತ್ಸತ್ಯತ್ವಧೀರಪಿ ॥' ಎಂಬ ವಚನದಂತೆ ಅನಾದ್ಯ ತಕೋಟಿ ಜನ್ಮಗಳಿಂದಲು ದೇಹವೇ ನಾನು ಮತ್ತು ಜಗತ್ತು ಎಂಬ ಭ್ರಾಂತಿಯು ಇರುವುದರಿಂದ 'ಆವೃತ್ತಿರಸಕೃದುಪ ಶಾತ್' ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ ಮಹಾವಾಕ್ಯಾ ವಿಚಾರದ ದೆಸೆಯಿಂದ ಬ್ರಹ್ಮಾತ್ಮಜ್ಞಾನವುಂಟಾದ ಬಳಿಕ ಬಾರಿಬಾರಿಗೂ ವೇದಾಂತ ಶ್ರವಣ ಮನನ ನಿಧಿಧ್ಯಾಸನಗ ನ್ನು ಮಾಡತಕ್ಕದ್ದೆಂದು ಶ್ರೀ ಶಂಕರಭಗವತ್ಪಾದರವರು ಅಪ್ಪ ಣೆಯನ್ನು ಮಾಡಿದ್ದಾರೆ.

ಪ್ರಮಾದೋಬ್ರಹ್ಮನಿಷ್ಠಾಯಾಂ ನ ಕರ್ತವ್ಯಃ ಕದಾಚನ ।
ಪ್ರಮಾದೋಮೃತ್ಯುರಿತ್ಯಾಹುರ್ವಿದ್ಯಾಯಾಂ ಬ್ರಹ್ಮವೇ
ದಿನಃ ॥

ಬ ಅಧ್ಯಾತ್ಮಶ್ರುತಿಯಂತೆ ಜ್ಞಾನಿಗಳೂ ಕೂಡ ಸದಾ ಬ್ರಹ್ಮ ತನೆಯಲ್ಲೇ ಇರತಕ್ಕದ್ದು. ಏತಕ್ಕೆಂದರೆ ಕೆರೆಯ ನೀರಿನ ಚೆಯನ್ನು ಎಷ್ಟು ದೂರ ತಳ್ಳಿದರೂ ತಿರುಗಿ ಕೂಡಲೆ ಆ ಚೆಯು ಯಥಾಪ್ರಕಾರವಾಗಿ ಹೇಗೆ ನೀರನ್ನು ಮುಚ್ಚುವು ೇ ಹಾಗೆ ಎಷ್ಟು ಬ್ರಹ್ಮವೇತ್ತನಾದರೂ ಸದಾ ಬ್ರಹ್ಮಚಿಂತನೆ ಲ್ಲಿಲ್ಲದಿದ್ದರೆ ಅವನನ್ನು ಮಾಯಾಶಕ್ತಿಯು ಆವರಿಸಿ ಜನನ ರಣಗಳನ್ನುಂಟುಮಾಡುವುದು.

ತಕಾಲೇ ಚ ಮಾಮೇವ ಸ್ಮರನ್ಮುಕ್ತ್ವಾ ಕಳೇಬರಂ ।
ಃ ಪ್ರಯಾತಿ ಸಮದ್ಭಾವಂ ಯಾತಿ ನಾಸ್ತ್ಯತ್ರ ಸಂಶಯಃ ॥
ಂ ಯಂ ವಾಪಿ ಸ್ಮರನ್ಭಾವಂ ತ್ಯಜತ್ಯಂತೇ ಕಳೇಬರಂ ।
ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥

ಬ ಗೀತಾವಚನಗಳಂತೆ ಯಾವನಿಗೆ ಮರಣಕಾಲದಲ್ಲಿ ತಾನೇ ಹ್ಮವೆಂಬ ಭಾವನೆಯಿರುತ್ತದೋ ಅವನು ಬ್ರಹ್ಮದಲ್ಲಿ ಏಕತ್ವ ನ್ನು ಹೊಂದುತ್ತಾನೆ. ತಾನೇ ಬ್ರಹ್ಮವೆಂದು ತಿಳಿದು ಅದನ್ನು ಅನುಭವಕ್ಕೆ ತಂದುಕೊಳ್ಳುವುದಲ್ಲದೆ ಬದುಕಿರುವಾಗಲೇ ಸದಾ ಬ್ರಹ್ಮಭಾವದಲ್ಲಿದ್ದರೇನೇ ಈ ದೃಢಾಭ್ಯಾಸದಿಂದ ಮರಣಕಾಲ ದಲ್ಲಿ ನಾನೇ ಬ್ರಹ್ಮ ಎಂಬ ಭಾವನೆಯು ಇರುತ್ತದೆ.

ಇಷ್ಟೇ ಅಲ್ಲದೆ ಬ್ರಹ್ಮಸಾಕ್ಷಾತ್ಕಾರ ಅಂದರೆ ಬ್ರಹ್ಮದ ಅನು ಭವ. ಬ್ರಹ್ಮದ ಅನುಭವ ಅಂದರೆ ಬ್ರಹ್ಮವೇ ಆನಂದವಾದ್ದ ರಿಂದ ಸದಾ ಬ್ರಹ್ಮಾನಂದದಲ್ಲೇ ಇರುವದು. ಇದು ನಿಧಿಧ್ಯಾಸನ ಅಂದರೆ ಸವಿಕಲ್ಪ ಸಮಾಧಿಯ ಅಭ್ಯಾಸದಿಂದ ಉಂಟಾಗುತ್ತದೆ ಯೇ ಹೊರತು ನಾನು ಬ್ರಹ್ಮ ಎಂಬುದಾಗಿ ಸುಮ್ಮನೆ ತಿಳಿದರೆ ಬ್ರಹ್ಮಾನಂದವು ತೋರುವುದಿಲ್ಲ. ಈ ಬ್ರಹ್ಮಾನಂದವೇ ವೇ ದಾಂತ ವಿಚಾರವನ್ನು ಮಾಡಿದ್ದಕ್ಕೆ ಪ್ರಯೋಜನವು. ಆದರೆ ರೋಗಿಯ ಹಿತವನ್ನು ಬಯಸುವ ವೈದ್ಯನು ರೋಗಿಯನ್ನು ಕಠಿಣಪಥ್ಯದಲ್ಲಿಟ್ಟಿದ್ದು ಇನ್ನೊಬ್ಬನು ಬಂದು ರೋಗಿಗೆ ಇಚ್ಛೆ ಯಾದ ಆಹಾರವನ್ನು ತೆಗೆದುಕೊಳ್ಳಬಹುದೆಂದು ಹೇಳಿದರೆ ರೋಗಿಯು ಹೇಗೆ ವೈದ್ಯನ ಮಾತನ್ನು ನಿರಾಕರಿಸಿ ಇನ್ನೊಬ್ಬನ ಮಾತಿನಂತೆ ನಡೆಯುತ್ತಾನೋ ಹಾಗೆ ಕಷ್ಟಸಾಧ್ಯವಾದ ವೈರಾ ಗ್ಯ, ದೈವಭಕ್ತಿ, ಬ್ರಹ್ಮಸಾಕ್ಷಾತ್ಕಾರ ಮತ್ತು ಸಮಾಧಿ ಇವುಗಳ ನ್ನು ಮುಮುಕ್ಷುಗಳು ನಿರಾಕರಿಸಿ 'ನಾನು ಬ್ರಹ್ಮ' ಎಂದು ತಿಳಿದು ಸುಷುಪ್ತ್ಯವಸ್ಥೆಯನ್ನು ಅನುಭವಿಸಿದರೆ ಮೋಕ್ಷವಾಗು ತ್ತದೆ ಎಂದು ಹೇಳುವ ಮೂಲಾವಿದ್ಯಾನಿರಾಸಕರ ಮಾತಿಗೆ ಕಿವಿ ಗೊಡುವುದು ಸಹಜವಾಗಿದೆ. ಆದುದರಿಂದ ನಿಜವಾಗಿ ಮೋಕ್ಷ ವನ್ನು ಪಡೆಯಲಿಚ್ಛಿಸುವ ಮುಮುಕ್ಷುಗಳು ಮೂಲಾವಿದ್ಯಾ ನಿರಾಸಕರ ಘೋಷೆಗೆ ಮನಸ್ಸನ್ನು ಕೊಡದೆ ಮೋಕ್ಷಕ್ಕೆ ಆವಶ್ಯ ಕವಾದ ಸಾಧನಗಳನ್ನು ಅಭ್ಯಾಸಮಾಡತಕ್ಕದ್ದು.

ಈಗ ಇದುವರೆಗೆ ವಿಚಾರಮಾಡಿದ್ದರಿಂದ ನಿಮ್ಮ ಲೇಖನ ಗಳ ಪ್ರಕಾರ ವಾದಗ್ರಸ್ತವಾಗಿದ್ದ ಮೂಲಾವಿದ್ಯೆಯ ಇರುವಿಕೆ ಯು, ಸುಷುಪ್ತ್ಯವಸ್ಥೆಗಿಂತ ಸಮಾಧಿಯು ಬೇರೆಯಾಗಿರುವುದು, ದೇಹಾದಿ ಉಪಾಧಿಗಳಿರುವವರೆಗೆ ಸ್ವರೂಪಸ್ಥಿತಿಯಲ್ಲಿರುವದು ಜೀವನ್ಮುಕ್ತಿಯೆನ್ನಲ್ಪಡುವದು, ಉಪಾಧಿಗಳು ಕಳೆದನಂತರ ಬ್ರಹ್ಮದಲ್ಲಿ ಏಕತ್ವವನ್ನು ಹೊಂದುವದು ವಿದೇಹಮುಕ್ತಿಯೆನ್ನ ಲ್ಪಡುವದು ನಿರ್ವಿವಾದವಾಗಿ ಸಿದ್ಧವಾಯಿತು. ಇದು ನಿಮಗೆ ಒಪ್ಪಿಗೆಯಾಗದೇ ಇದ್ದರೆ ನಿಮ್ಮ ಮುಂದಿನ ಸಂಚಿಕೆಯಲ್ಲಿ ನಾ ವು ಕೊಟ್ಟಿರುವ ಪ್ರಮಾಣಗಳನ್ನು ಅನುವಾದಮಾಡಿ ಅವಲ್ಲಿ ದೋಷವನ್ನು ತೋರಿಸಿ ನಿಮ್ಮ ವಾದವನ್ನೇ ಸಮರ್ಥನೆಯನ್ನು ಮಾಡಿ. ಅದು ಸಾಧ್ಯವಿಲ್ಲವೆಂದು ತೋರಿದರೆ ಅಭಿಮಾನವನ್ನು ಬಿಟ್ಟು ಇದುವರೆಗೆ ನೀವು ತಿಳಿದದ್ದು ತಪ್ಪು ಎಂದು ಒಪ್ಪಿ ನಿಮ್ಮ ದೊಡ್ಡಸ್ತಿಕೆಯನ್ನು ತೋರಿಸಿ. ಹಾಗೆ ಮಾಡಲೂ ಸಾಧ್ಯ ವಿಲ್ಲವಾದರೆ ಇನ್ನು ಮುಂದೆ ಈ ವಿಷಯಗಳನ್ನು ಪ್ರಕಟಿಸ ಬೇಡಿ. ಇದೇ ಮುಮುಕ್ಷುಗಳ ಪರವಾಗಿ ನಾವು ನಿಮಗೆ ಮಾಡುವ ಕೊನೇ ಪ್ರಾರ್ಥನೆ.

ಸಂ.

ಮಹಾಸುಪ್ತಿಃ, ಯಸ್ಯಾಂ ಸ್ವರೂಪ ಪ್ರತಿಬೋಧರಹಿತಾಃ ಶೇರತೇ ಸಂಸಾರಿಣೋ ಜೀವಾಃ, ತದೇತದವ್ಯಕ್ತಂ ಆಕಾಶ ಶಬ್ದ ನಿರ್ದಿಷ್ಟಂ, ಕ್ವಚಿದಕ್ಷರಶಬ್ದೋದಿತಂ, ಕ್ವಚಿತ್‌ಮಾಯೇತಿಸೂಚಿತಂ, ಅವ್ಯಕ್ತಾ ಹಿ ಸಾ ಮಾಯಾ, ತತ್ವಾನ್ಯತ್ವ ನಿರೂಪಣಸ್ಯ ಅಶಕ್ಯತ್ವಾತ್, ತದಿದಂ ಮಹತಃ ಪರಮವ್ಯಕ್ತಮಿತ್ಯುಕ್ತಂ ...... ಯದಾತು ಜೀವೋಮಹಾ ತದಾಪಿ ಅವ್ಯಕ್ತಾಧೀನತ್ವಾಜ್ಜೀವಭಾವಸ್ಯಮಹತಃ ಪರಮವ್ಯಕ್ತಮಿತ್ಯುಕ್ತಂ, ಅವಿದ್ಯಾಹಿ ಅವ್ಯಕ್ತಂ, ಅವಿದ್ಯಾವತ್ವೇನೈವ ಜೀವಸ್ಯ ಸರ್ವಸ್ಸಂವ್ಯವಹಾರಃ ಸಂತತೋ ವರ್ತತೇ " ಅಂದರೆ

ಸರ್ವಜಗತ್ತಿಗೂ ಕಾರಣವಾದ ಪ್ರಧಾನವನ್ನು ಸಾಂಖ್ಯರಂತೆ ಮುಖ್ಯವಾಗಿ ಕಾರಣವೆಂದು ಭಾವಿಸುವುದಿಲ್ಲ. ಮತ್ತೇನೆಂದರೆ—ಪರಮೇಶ್ವರಾಧೀನವಾದ ಜಗತ್ಸೃಷ್ಟಿಗೆ ಮುಂಚಿತವಾಗಿದ್ದ "**ಮೂಲಪ್ರಕೃತಿ** ಅಥವಾ **ಮೂಲಾವಿದ್ಯಾ**" ಎಂಬುದನ್ನು ನಾವು ಅಂಗೀಕರಿಸಲೇಬೇಕು. ತನ್ನ ಶಕ್ತಿಸ್ವರೂಪವಾದ ಮಾಯಾಪರಪರ್ಯಾಯವಾದ ಅವಿದ್ಯೆಯು ಇಲ್ಲದಿದ್ದರೆ ನಿರ್ಧರ್ಮಕ, ನಿರ್ವಿಕಾರ, ನಿತ್ಯನಾದ ಈಶ್ವರನಿಂದ ಜಗತ್ತನ್ನು ಸೃಷ್ಟಿಸಲು ಸಾಧ್ಯವಿಲ್ಲ. ಈ ಅವಿದ್ಯಾತ್ಮಕವಾದ ಬೀಜಶಕ್ತಿಯು "**ಅವ್ಯಕ್ತ, ಮಾಯಾ, ಮಹಾಸುಪ್ತಿಃ**" ಎಂಬ ನಾಮಗಳಿಂದ ಪರಮೇಶ್ವರಾಧೀನವಾಗಿ ಜಗತ್ತಿಗೆ ಮೂಲಕಾರಣವಾಗಿರುತ್ತದೆ. ಆದರೂ ಸ್ವರೂಪ (ಆತ್ಮ) ಜ್ಞಾನದಿಂದ ಆ ಬೀಜಶಕ್ತಿಯನ್ನು ನಾಶಪಡಿಸಬಹುದು. ಆದುದರಿಂದಲೇ ಮುಕ್ತರಿಗೆ ಪುನಃ ಸಂಸಾರಬಂಧವಿರುವುದಿಲ್ಲ. ಈ ಮೂಲಾವಿದ್ಯಾತ್ಮಕ ಬೀಜಶಕ್ತಿಯು '**ಅವ್ಯಕ್ತ**' ವೆಂಬುದಾಗಿಯೂ ಹೇಳಲ್ಪಡುತ್ತದೆ. '**ಅವ್ಯಕ್ತ**' ವೆಂದರೆ ನಿರ್ವಚನೆ ಮಾಡುವುದಕ್ಕೆ ಅನರ್ಹವು, ಅಂದರೆ, ಆತ್ಮಸ್ವರೂಪತ್ವೇನ, ಆತ್ಮಭಿನ್ನತ್ವೇನ ನಿರೂಪಣೆಮಾಡಲು ಸಾಧ್ಯವಾಗಲಾರದು. ಈ ರೀತಿಯಾದ ಭಾಷ್ಯಪಂಕ್ತಿಗೆ "**ಮಹತಃ ಪರಮವ್ಯಕ್ತಂ**" ಎಂಬ **ಕಠೋಪನಿಷತ್ತೇ** ಮೂಲಾಧಾರವು. '**ಅವಿದ್ಯೆ**' ಎಂಬುದೇ ಅವ್ಯಕ್ತವಾಗಬೇಕಾದುದು? ಅವಿದ್ಯೆಯಿಂದಲೇ ಜೀವನಿಗೆ ಸರ್ವವಿಧವಾದ **ವ್ಯವಹಾರವೂ** ಜರಗುವದು.

ಎಂಬುದಾಗಿ ಹೇಳಿರುವಂತೆ ಅವಿದ್ಯಾ ಎಂಬುದು ಪರಮೇಶ್ವರನ ಶಕ್ತಿಯಾಗಿ ಅವನ ಆಶ್ರಯದಲ್ಲಿ ಇದ್ದುಕೊಂಡು ಜೀವರಿಗೆ ಸರ್ವವಿಧವಾದ ವ್ಯವಹಾರವನ್ನುಂಟುಮಾಡಿ ಅವರ ಸ್ವರೂಪಜ್ಞಾನದಿಂದ ನಷ್ಟವನ್ನು ಹೊಂದುತ್ತದೆ. ಆದುದರಿಂದ ಮೂಲಾವಿದ್ಯೆಯು ಇದೆ ಎಂದು ನೀವು ಒಪ್ಪಿಕೊಂಡು ಅದರ ನಿವಾರಣೆಗೆ ಸ್ವರೂಪಜ್ಞಾನವನ್ನು ಸಂಪಾದಿಸುವುದಲ್ಲದೆ ಇದನ್ನೇ ಇತರರಿಗೂ ಬೋಧಿಸತಕ್ಕದ್ದು ಸಾಧುವಾದದ್ದು.

ನಾನು ಬ್ರಹ್ಮ ಎಂಬುದಾಗಿ ತಿಳಿದುಕೊಂಡರೆ ಸಾಕು, ಇದಕ್ಕೆ ಯಾವ ಅಭ್ಯಾಸವು ಬೇಕಿಲ್ಲ, ಸುಷುಪ್ತ್ಯವಸ್ಥೆಗಿಂತ ಬೇರೆ ಸಮಾಧಿಯೇ ಇಲ್ಲ ಎಂಬುದಾಗಿ ನೀವು ಮುಮುಕ್ಷುಗಳಿಗೆ ಬೋಧಿಸುತ್ತಿರುವಿರಿ. ಇದರಿಂದ ನೀವು ಕೆಡುವುದಲ್ಲದೆ ನಿಮ್ಮ ಬೋಧೆಯನ್ನು ನಂಬುವ ಮುಮುಕ್ಷುಗಳನ್ನೂ ಸಹ ಕೆಡಿಸುತ್ತಿದ್ದೀರಿ. ಏತಕ್ಕೆಂದರೆ ನಿಮ್ಮ ಬೋಧೆಯೇ ನಿಜವಾಗಿದ್ದರೆ ಮೋಕ್ಷವನ್ನು ಪಡೆಯುವುದಕ್ಕೆ ಸುಖೇಚ್ಛಾ, ಸದಾತ್ಮವಿಚಾರ, ನಿಸ್ಸಂಗ, ವಾಸನಾಕ್ಷಯ, ಆನಂದಿನೀ, ತುರ್ಯ, ತುರ್ಯಾತೀತ ಎಂಬ ಸಪ್ತಭೂಮಿಕೆಗಳನ್ನಾಗಲಿ ಅಥವಾ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿ ಎಂಬ ಅಷ್ಟಾಂಗಯೋಗವನ್ನಾಗಲಿ ಯಾರೂ ಅಭ್ಯಾಸಮಾಡಬೇಕಾದ ಆವಶ್ಯಕತೆಯೇ ಇರುತ್ತಿರಲಿಲ್ಲ. ಇದಕ್ಕೆ ಬದಲಾಗಿ

ಆತ್ಮಾನಾತ್ಮವಿವೇಚನಂ ಸ್ವನುಭವೋ ಬ್ರಹ್ಮಾತ್ಮನಾ ಸಂಸ್ಥಿತಿಃ ||
ಮುಕ್ತಿರ್ನೋ ಶತಕೋಟಿಜನ್ಮಸುಕೃತೈಃಪುಣ್ಯೈರ್ವಿನಾ ಲಭ್ಯತೇ ||

ಎಂದರೆ ಸತ್ಚಿಜ್ಞಾನಾನಂದ ಲಕ್ಷಣಗಳುಳ್ಳದ್ದು ಆತ್ಮಾ ಎಂಬುದಾಗಿಯು ಮತ್ತು ಅಸತ್, ಜಡ, ದುಃಖ ಲಕ್ಷಣಗಳುಳ್ಳದ್ದು ಅನಾತ್ಮಾ ಎಂಬುದಾಗಿಯು ತಿಳಿದು ತನ್ನ ಸತ್ಯಜ್ಞಾನಾನಂದ ಸ್ವರೂಪವನ್ನು ಅನುಭವಕ್ಕೆ ತಂದುಕೊಂಡು ಸದಾ ಆ ಸ್ಥಿತಿಯಲ್ಲಿದ್ದರೆ ಅವನಿಗೆ ಮೋಕ್ಷವಾಗುತ್ತದೆಂದು ಮತ್ತು ಅನೇಕ ಕೋಟಿ ಜನ್ಮಗಳಲ್ಲಿ ಇವನು ಮಾಡಿದ ಪುಣ್ಯದಿಂದ ಇದು ಲಭಿಸುತ್ತದೆಂದು ಶ್ರೀಶಂಕರಭಗವತ್ಪಾದರೇ ಅಪ್ಪಣೆಕೊಟ್ಟಿರುತ್ತಾರೆ. ಇದರಿಂದ ತಾನು ಆತ್ಮಾ ಅಥವಾ ಬ್ರಹ್ಮ ಎಂಬುದಾಗಿ ಸುಮ್ಮನೆ ತಿಳಿದರೆ ಸಾಲದು. ತನ್ನಲ್ಲಿರುವ ಬ್ರಹ್ಮಲಕ್ಷಣವು ತನ್ನ ಅನುಭವಕ್ಕೆ ಬರಬೇಕು. ಅಂದರೆ ತಾನು ಅನುಭವಿಸಬೇಕು. ಇದಕ್ಕೆ ಬ್ರಹ್ಮಸಾಕ್ಷಾತ್ಕಾರ ಎಂದು ಹೆಸರು. ಇಷ್ಟೇ ಸಾಲದು. ಆ ಅನುಭವವು ಸದಾ ಇರಬೇಕು. ಇದೇ ತುರ್ಯಾವಸ್ಥೆ ಅಥವಾ ಸವಿಕಲ್ಪಸಮಾಧಿ. ಈ ಸ್ಥಿತಿಯಲ್ಲಿ ಮರಳುಕಾಡಿನಲ್ಲಿ ಜಲಪ್ರವಾಹವು ತೋರಿದರೂ ಅದು ನಿಜವಾಗಿಲ್ಲವೆಂದು ಹೇಗೆ ತಿಳಿದವರು ನಿಶ್ಚೈಸುವರೋ ಅದರಂತೆ ದೇಹಾದಿ ಪ್ರಪಂಚವು ತೋರಿದರೂ ಅದು ಇಲ್ಲವೆಂಬ ನಿಶ್ಚಯವಿರುತ್ತದೆ. ಈ ಸ್ಥಿತಿಯಲ್ಲಿ ಕೆಲವು ಕಾಲವಿದ್ದರೆ ಆಗ ದೇಹಾದಿ ಪ್ರಪಂಚದ ತೋರಿಕೆಯೂ ಸಹ ಹೋಗಿಬಿಡುತ್ತದೆ. ಈ ಸ್ಥಿತಿಗೆ ತುರ್ಯಾತೀತ ಅಥವಾ ನಿರ್ವಿಕಲ್ಪ ಸಮಾಧಿ ಎಂದು ಹೆಸರು. ಈ ಎರಡು ವಿಧವಾದ ಸಮಾಧಿಗಳಲ್ಲು ಸಾಧಕನು ಸ್ವರೂಪಾನಂದವನ್ನು ಅನುಭವಿಸುತ್ತಾನೆ.

'ಆತ್ಮಾವಾರೇದ್ರಷ್ಟವ್ಯಃ ಶ್ರೋತವ್ಯೋಮಂತವ್ಯೋನಿಧ್ಯಾಸಿತವ್ಯಃ' ಎಂಬ ಬೃಹದಾರಣ್ಯಕ ಶ್ರುತಿಯಂತೆ ಆತ್ಮಜ್ಞಾನಕ್ಕೆ ಶ್ರವಣಮನನನಿಧಿಧ್ಯಾಸನಗಳು ಸಾಧನಗಳಾಗಿವೆ. 'ವೇದಾಂತಾನಾಮಶೇಷಾಣಾಮಾದಿಮಧ್ಯಾವಸಾನತಃ | ಬ್ರಹ್ಮಾತ್ಮನ್ಯೇವ ತಾತ್ಪರ್ಯಮಿತಿ ಧೀಃ ಶ್ರವಣಂ ಭವೇತ್' ಎಂಬ ವಚನದಂತೆ ಸಮಸ್ತ ವೇದಾಂತವಾಕ್ಯಗಳಿಗೆ ಪೂರ್ವಾಪರವನ್ನು ವಿಚಾರಮಾಡಿ ನೋಡಿದರೆ ಬ್ರಹ್ಮಾತ್ಮಬೋಧದಲ್ಲಿಯೇ ತಾತ್ಪ

ಗಾಢನಿದ್ರೆಯಲ್ಲಿರುವವನ ಮನಸ್ಸು ಅಜ್ಞಾನದಿಂದ ಆವರಿಸಲ್ಪಟ್ಟು ಅನೇಕ ಅನರ್ಥ ಫಲಗಳನ್ನು ಕೊಡುವ ಕರ್ಮಗಳಿಗೆ ಬೀಜವಾದ ಕರ್ಮವಾಸನೆಗಳ ಸಹಿತ ಅಜ್ಞಾನದಲ್ಲಿ ಲೀನವಾಗಿರುತ್ತದೆ. ಸಮಾಧಿಸ್ಥಿತಿಯಲ್ಲಿ ಅಧೀನಗೊಳಿಸಲ್ಪಟ್ಟ ಮನಸ್ಸು 'ಆತ್ಮನೇ ಸತ್ಯ' ಎಂಬ ಜ್ಞಾನಾಗ್ನಿಯಿಂದ ಅವಿದ್ಯೆ ಮೊದಲಾದ ಅನೇಕ ಅನರ್ಥಪ್ರವೃತ್ತಿಗಳು ಸುಡಲ್ಪಡಲಾಗಿ ಸರ್ವದುಃಖಗಳ ಸೋಂಕಿನಿಂದ ಬಿಡುಗಡೆ ಹೊಂದಿ ಆತ್ಮದ ಸ್ವರೂಪವಾಗಿಯೇ ಇರುತ್ತದೆ. ಎಂದ ಮೇಲೆ ಸಮಾಧಿಯ ಸ್ಥಿತಿಯಲ್ಲಿ ತಡೆಯಲ್ಪಟ್ಟ ಮನಸ್ಸಿಗೂ ಮತ್ತು ಸುಷುಪ್ತ್ಯವಸ್ಥೆಯಲ್ಲಿ ಲೀನವಾದ ಮನಸ್ಸಿಗು ಇರುವ ವ್ಯತ್ಯಾಸವನ್ನು ಕಂಡು ಹಿಡಿಯಬಹುದು' ಎಂಬುದಾಗಿ ವಿಕಲ್ಪಕ್ಕೆ ಸಮಾಧಾನವನ್ನು ಹೇಳಿದ್ದಾರೆ. ಇದರಿಂದ ಸುಷುಪ್ತ್ಯವಸ್ಥೆಯಲ್ಲಿ ಅವಿದ್ಯೆಯಿದೆ ಎಂಬುದನ್ನು ಮತ್ತು ಸುಷುಪ್ತಿಗು ಮತ್ತು ಸಮಾಧಿಗು ವ್ಯತ್ಯಾಸವಿದೆ ಎಂಬುದನ್ನು ಶ್ರೀಮಚ್ಛಂಕರ ಭಗವತ್ಪಾದರವರು, ಅವರ ಪರಮಗುರುಗಳು ಮತ್ತು ಕೈವಲ್ಯ ಮಾಂಡೂಕ್ಯಾದಿ ಶ್ರುತಿಗಳು ಹೇಳಿವೆ ಎಂಬುದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಇಷ್ಟೇ ಅಲ್ಲದೆ ನೀವು ಹೇಳುವಂತೆ ಸುಷುಪ್ತ್ಯವಸ್ಥೆಯಲ್ಲಿ ಜೀವಾತ್ಮನು ಅವಿದ್ಯೆಯೇ ಮುಂತಾದ ಯಾವ ಉಪಾಧಿಗಳೂ ಇಲ್ಲದೆ ಪರಬ್ರಹ್ಮದಲ್ಲಿ ಏಕತ್ವವನ್ನು ಹೊಂದುವುದಾದರೆ ಜೀವಾತ್ಮನು ಮುಕ್ತರಂತೆ ಪುನಃ ಜೀವತ್ವವನ್ನು ಪಡೆಯುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಏತಕ್ಕೆಂದರೆ ಒಂದು ಗಡಿಗೆಯಲ್ಲಿರುವ ನೀರನ್ನು ಗಡಿಗೆ ಸಹಿತವಾಗಿ ಸರೋವರದಲ್ಲಿ ಮುಳುಗಿಸಿದರೆ ಆ ನೀರು ಪುನಃ ಗಡಿಗೆ ಸಹಿತವಾಗಿ ಹಿಂತಿರುಗಿ ಬರುವ ಸಂಭವವುಂಟು. ಇದಕ್ಕೆ ಬದಲಾಗಿ ಬರೀ ನೀರನ್ನೇ ಸರೋವರದಲ್ಲಿ ಹುಯ್ದರೆ ಆ ನೀರು ಸರೋವರದ ನೀರಿನಲ್ಲಿ ಬೆರೆದು ಹೋಗುವುದರಿಂದ ಅದು ಹಿಂದಿರುಗಿ ಬರುವ ಸಂಭವವೇ ಇಲ್ಲ. ಇದರಂತೆ ಸುಷುಪ್ತ್ಯವಸ್ಥೆಯಲ್ಲಿ ಜೀವಾತ್ಮನು (ಗಡಿಗೆ ಸಹಿತವಾದ ನೀರಿನಂತೆ) ಅವಿದ್ಯೋಪಾಧಿ ಸಹಿತನಾಗಿ ಪರಬ್ರಹ್ಮದಲ್ಲಿ ಏಕತ್ವವನ್ನು ಹೊಂದುವುದರಿಂದ ಪುನಃ ಅವಿದ್ಯಾ ಸಹಿತನಾಗಿ ಹಿಂದಿರುಗುತ್ತಾನೆ. ಸಮಾಧಿಯಲ್ಲಿಯು ಜೀವಾತ್ಮನು ಶುದ್ಧವಾದ ಅಂತಃಕರಣದ ಉಪಾಧಿಸಹಿತ ಪರಬ್ರಹ್ಮದಲ್ಲಿ ಏಕತ್ವವನ್ನು ಹೊಂದುವುದರಿಂದ ಪುನಃ ಅಂತಃಕರಣ ಸಹಿತವಾಗಿ ಹಿಂತಿರುಗುತ್ತಾನೆ. ಈ ಸಮಾಧಿಸ್ಥಿತಿಯನ್ನು ಅನುಭವಿಸುವವರೇ ಜೀವನ್ಮುಕ್ತರೆನಿಸಿಕೊಳ್ಳುತ್ತಾರೆ. ಇವರು ಪ್ರಾರಬ್ಧಕರ್ಮವು ಮುಗಿದ ಒಡನೆ ಇವರ ಅಂತಃಕರಣ ಸಹಿತವಾದ ಲಿಂಗಶರೀರವು ಭಂಗವಾಗಿ ಒಡೆದ ಮಡಕೆಯ ನೀರು ಸರೋವರದ ನೀರಿನಲ್ಲಿ ಹೇಗೆ ಏಕತ್ವವನ್ನು ಹೊಂದುತ್ತದೆಯೋ ಹಾಗೆಯೇ ಪರಬ್ರಹ್ಮದಲ್ಲಿ ಏಕತ್ವವನ್ನು ಹೊಂದುವರು. ಇದೇ ವಿದೇಹಮುಕ್ತಿಯೆನಿಸಲ್ಪಡುವುದು.

ಮೂಲಾವಿದ್ಯೆಯು ಇದೆ ಎಂದು ಶ್ರುತಿಯು ಮತ್ತು ಆಚಾರ್ಯರು ಹೇಳಿರುವುದಲ್ಲದೆ ಮೂಲಾವಿದ್ಯೆಯು ಇದೆ ಎಂಬುವುದು ನಮ್ಮ ಅನುಭವದಿಂದಲೂ ಗೊತ್ತಾಗುತ್ತದೆ. ಏತಕ್ಕೆಂದರೆ ಯಾರನ್ನಾದರು 'ನೀನು ಯಾರು' ಎಂಬುದಾಗಿ ಕೇಳಿದರೆ 'ನಾನು ಅಜ್ಞಾನಿ, ನಾನು ಯಾರೋ ತಿಳಿಯೆ' ಎಂದು ಹೇಳುವುದುಂಟು. ಇದರಿಂದ ಅಜ್ಞಾನವಿದೆ ಎಂಬುದು ಗೊತ್ತಾಗುತ್ತದೆ. ಇಷ್ಟೇ ಅಲ್ಲದೆ ಗಾಢನಿದ್ರೆ (ಸುಷುಪ್ತ್ಯವಸ್ಥೆ)ಯಿಂದ ಎಚ್ಚತ್ತವನು 'ನಾನು ಏನನ್ನೂ ತಿಳಿಯಲಿಲ್ಲ. ಸುಖವಾಗಿ ನಿದ್ರೆಯನ್ನು ಮಾಡಿದೆನು' ಎಂದು ತಾನು ನಿದ್ರೆಯಲ್ಲಿ ಅನುಭವಿಸಿದ್ದನ್ನು ಹೇಳುತ್ತಾನೆ. ಒಂದು ಅಂಧಕಾರವಿರತಕ್ಕ ಕೊಠಡಿಯಲ್ಲಿ ಅನೇಕ ಪದಾರ್ಥಗಳಿದ್ದು ಅವುಗಳನ್ನು ನೋಡಿಕೊಂಡು ಬಾ ಎಂಬುದಾಗಿ ಯಾರಿಗಾದರೂ ನಾವು ಹೇಳಿದರೆ ಅವನು ಹೋಗಿ ಕೊಠಡಿಯಲ್ಲಿ ಯಾವ ಪದಾರ್ಥವನ್ನೂ ಕಾಣದೆ ಅಂಧಕಾರವನ್ನು ಮಾತ್ರ ನೋಡಿದರೂ ನಮ್ಮಲ್ಲಿಗೆ ಬಂದು ಅಂಧಕಾರವನ್ನು ಕಂಡೆ ಎಂಬುದಾಗಿ ಹೇಳದೆ ಏನನ್ನೂ ಕಾಣಲಿಲ್ಲ ಎಂಬುದಾಗಿ ಹೇಗೆ ಹೇಳುತ್ತಾನೋ ಹಾಗೆ ಸುಷುಪ್ತ್ಯವಸ್ಥೆಯಲ್ಲಿ ತನ್ನನ್ನು ಆವರಿಸಿರತಕ್ಕ ಅಜ್ಞಾನವನ್ನು ತಾನು ಅರಿತರೂ ಎಚ್ಚತ್ತಮೇಲೆ ಅಜ್ಞಾನವನ್ನು ಅರಿತೆನು ಎಂದು ಹೇಳದೆ ನಾನು ಏನನ್ನೂ ಅರಿಯಲಿಲ್ಲ ಎಂದು ಹೇಳುತ್ತಾನೆ. ಈ ವಿಷಯವನ್ನು 'ಅಜ್ಞಾನಮಪಿ ಸಾಕ್ಷ್ಯಾದಿವೃತ್ತಿಭಿಶ್ಚಾನುಭೂಯತೇ । ತಥಾಹಂ ಸುಖಮಸ್ವಾಪ್ಸಂ ನೈವ ಕಿಂಚಿದವೇದಿಷಂ' ಎಂಬ ಶಿವಗೀತಾವಚನವು ಸಮರ್ಥಿಸುತ್ತದೆ.

